# ಜನತಾವಾಣಿ

ಸಂಪಾದಕರು : ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಗುರುವಾರ, ಫೆಬ್ರವರಿ 13, 2025, ಸಂಪುಟ : 51 ಸಂಚಿಕೆ : 272 ☎ 08192-254736 91642 99999

RNI No: 27369 ಪುಟ : 6 ರೂ : 5.00 www.janathavani.com janathavani@mac.com


## ಮಂಡಲೂರಿನ ರುದ್ರಮುನಿ ಅವರಿಗೆ ಪಿತೃ ವಿಯೋಗ



ಶ್ಯಾಬನೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಡಿ.ಎಂ. ರುದ್ರಮುನಿ ಅವರ ತಂದೆ ಹಾಗೂ ದಾವಣಗೆರೆ ತಾಲ್ಲೂಕು ಮಂಡಲೂರು ಗ್ರಾಮದ

**ದ್ಯಾಮಪ್ಪರ ಶ್ರೀ ಎಂ.ಬಿ.ಮರುಳಪ್ಪ**

ಅವರು ದಿನಾಂಕ 12.2.2025ರ ಬುಧವಾರ ಬೆಳಿಗ್ಗೆ 7.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 94 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ನಾಲ್ವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 12.2.2025ರ ಬುಧವಾರ ಸಂಜೆ 3 ಗಂಟೆಗೆ ಮಂಡಲೂರಿನ ಮೃತರ ಜಮೀನಿನಲ್ಲಿ ನೆರವೇರಿಸಲಾಯಿತು.

ದುಃಖತಪ್ತ ಕುಟುಂಬ ವರ್ಗ, ದ್ಯಾಮಪ್ಪರ ವಂಶಸ್ಥರು, ಮೊ. 94485-89452

## ಅನುಸೂಯಮ್ಮ (ಪುಷ್ಪ) ನಿಧನ



ದಾವಣಗೆರೆ ಸಿಟಿ ಸ್ವಾಮಿ ವಿವೇಕಾನಂದ ಬಡಾವಣೆ, 4ನೇ ಕ್ರಾಸ್ ವಾಸಿ **ದಿ. ಗೌಡ್ರು ಚಿಕ್ಕನಹಳ್ಳಿ ಚಂದ್ರಪ್ಪ** ಅವರ ಧರ್ಮಪತ್ನಿ

**ಶ್ರೀಮತಿ ಅನುಸೂಯಮ್ಮ**

ಅವರು ದಿನಾಂಕ 12.02.2025ರ ಬುಧವಾರ ಸಂಜೆ 5.45ಕ್ಕೆ ನಿಧನರಾದರು. ಮೃತರಿಗೆ 72 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಇಬ್ಬರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 13.02.2025ರ ಗುರುವಾರ ಮಧ್ಯಾಹ್ನ 2 ಗಂಟೆಗೆ ಗ್ಲಾಸ್ ಹೌಸ್ ಹತ್ತಿರದ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖಖತಪ್ತ ಕುಟುಂಬ ವರ್ಗ, ಮೊ. 94822-00738, 94835-57230

## ನಾಲ್ಕನೇ ವರ್ಷದ ಪುಣ್ಯ ಸ್ಮರಣೆ



**ಶ್ರೀ ಸಣ್ಣ ಗೌಡ್ರ ಭೀಮಪ್ಪನವರು**

ನಿಧನ : 13.02.2021

ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷಗಳಾದವು.
ನೀವು ಸದಾ ನಮ್ಮ ಅಂತರಂಗದಲ್ಲಿ ನಮ್ಮೊಂದಿಗೆ ಇದ್ದೀರಿ.
ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ಪತ್ನಿ : ಶ್ರೀಮತಿ ಪುಷ್ಪ

ಮಗಳು-ಅಳಿಯ :

ಶ್ರೀಮತಿ ಸ್ಮಿತಾ ಶ್ರೀ ಹೆಚ್.ಎಸ್. ಕಿರಣ್


ಮೊಮ್ಮಗ ಚಿ।। ಷಮಂತ್ ಎಸ್.ಕೆ

ಶ್ಯಾಬನೂರು ಗೌಡ್ರ ವಂಶಸ್ಥರು ಮತ್ತು ಬಂಧು-ಮಿತ್ರರು.

ಫೋನ್ : 97408 67411, 98442 21305










**ಸದ್ಧರ್ಮ ಪೀಠಾರೋಹಣ** ಭರಮಸಾಗರದಲ್ಲಿ ನಡೆಯುತ್ತಿರುವ ತರಳಬಾಳು ಹುಣ್ಣಿಮೆ ಮಹೋತ್ಸವದ ಕೊನೆಯ ದಿನವಾದ ಬುಧವಾರ ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿಯವರು ಸದ್ಧರ್ಮ ಸಿಂಹಾಸನಕ್ಕೆ ಭಕ್ತಿ ಸಮರ್ಪಿಸಿ, ಭಕ್ತರ ಜಯಘೋಷಗಳ ನಡುವೆ ಪೀಠಾರೋಹಣ ಮಾಡಿದರು.

# ವಿಜೃಂಭಣೆಯಿಂದ ಜರುಗಿದ ತರಳಬಾಳು ಹುಣ್ಣಿಮೆ ಮಹೋತ್ಸವದ ಮೆರವಣಿಗೆ

ಭರಮಸಾಗರ, ಫೆ. 12 - ಸಿರಿಗೆರೆಯ ತರಳಬಾಳು ಬೃಹನ್ಮಠದ ಭಾವೈಕ್ಯತಾ ಹಬ್ಬವಾದ ಜರುಗಿದ ತರಳಬಾಳು ಹುಣ್ಣಿಮೆ ಮಹೋತ್ಸವದ ಪ್ರಯುಕ್ತ ತೆರೆದ ವಾಹನದಲ್ಲಿ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಯವರ ಬೆಳ್ಳಿಪಲ್ಲಕ್ಕಿ ಉತ್ಸವವು ತೆರೆದ ವಾಹನದಲ್ಲಿ ಶ್ರೀಮಠದ ಸಕಲ ಬಿರುದಾವಳಿಗಳೊಂದಿಗೆ ಬುಧವಾರ ಭರಮಸಾಗರದ ಪ್ರಮುಖ ಬೀದಿಗಳಲ್ಲಿ ವಿಜೃಂಭಣೆಯಿಂದ ಜರುಗಿತು.

ಮೆರವಣಿಗೆಯು ಸಾಮಿಲ್ ಶಿವಣ್ಣ ಮನೆಯಿಂದ ಬಿಚ್ಚುಗತ್ತಿ ಭರಮಣ್ಣನಾಯಕನ ಮಹಾವೇದಿಕೆಯ ಬಳಿ ಸಾಗಿತು. ಪ್ರತಿವರ್ಷದ ಶ್ರೀಮಠದ ಸಂಪ್ರದಾಯದಂತೆ ತರಳಬಾಳು ಹುಣ್ಣಿಮೆ ಉತ್ಸವದಲ್ಲಿ ಶ್ರೀಮಠದ ವಿದ್ಯಾರ್ಥಿಗಳು ಶಿವಧ್ವಜ ಹಿಡಿದು, ಮಹಿಳೆಯರು ಬಣ್ಣದ ಸೀರೆಯನ್ನುಟ್ಟು ಕುಂಭಮೇಳ ಹೊತ್ತು, ಅಪಾರ ಭಕ್ತಗಣವು ಡೊಳ್ಳುಕುಣಿತದ ಜೊತೆಗೆ ಸಾಗಿದರು.

ಗ್ರಾಮದ ಪ್ರತಿ ಬೀದಿಗಳ ಗ್ರಾಮಸ್ಥರು ತಳಿರು ತೋರಣ ಹಾಗೂ ಮಹಿಳೆಯರು ರಂಗೋಲಿ ಹಾಕಿ ಭಕ್ತಿ ಸಮರ್ಪಿಸಿದರು.

ಮೆರವಣಿಗೆಗೆಯಲ್ಲಿ ಕಡೂರಿನ ಪುರುಷ ಮತ್ತು ಮಹಿಳಾ ವೀರಗಾಸೆ, ಆಂಜನೇಯ ಗೊಂಬೆ, ಶಿವ ಗೊಂಬೆ, ಬೆಳ್ತಂಗಡಿಯ ನವಿಲು ಕುಣಿತ, ಗಾರುಡಿ ಗೊಂಬೆ, ಚೀಳಂಗಿಯ ಕಹಳೆ, ಹುಲ್ಲೇಹಾಳ್‌ನ ಪುರುಷ ಡೊಳ್ಳು, ಕೊಡಗವಳ್ಳಿಯ ನಾಸಿಕ್ ಡೋಲು, ಕಹಳೆ ಮತ್ತು ಛತ್ರಿ ಚಂಡೆವಾದ್ಯ, ಹುಲ್ಲೂರಿನ ಖಾಸಾ ಬೇಡರ ಪಡೆ, ಮಹಿಳಾ ತಮಟೆ, ಮೈಸೂರಿನ ಪೂಜಾ ಕುಣಿತ, ಸಾಗರದ ಮಹಿಳಾ ಡೊಳ್ಳು ತ್ರಾಶ್‌ವಾದ್ಯ, ಗೊರವರ ಕುಣಿತ, ತ್ರಾಶ್, ದಾವಣಗೆರೆಯ ನಂದಿಧ್ವಜ ಕುಣಿತ, ಹಂಪನೂರಿನ ನಾಸಿಕ್‌ಡೋಲು, ಹೊಸದುರ್ಗದ ವೀರಗಾಸೆ, ಕೊಡಗವಳ್ಳಿಯ ಅರಸನಗಟ್ಟದ ಅರೆವಾದ್ಯ, ಕೊಳಹಾಳ್ ಭಜನೆ, ವೀರಗಾಸೆ ಸೇರಿದಂತೆ ಇಪ್ಪತ್ತು ಹೆಚ್ಚು ಜಾನಪದ ಕಲಾತಂಡಗಳು ಮೆರವಣಿಗೆಯಲ್ಲಿ ಪ್ರದರ್ಶನ ನೀಡಿ ನೋಡುಗರ ಮನಸೂರೆಗೊಂಡವು.

ರಾಜ್ಯದ ನಾನಾ ಭಾಗಗಳಿಂದ ಅಪಾರ ಶ್ರೀಮಠದ ಭಕ್ತಾದಿಗಳು ಮೆರವಣಿಗೆಯಲ್ಲಿ ಪಾಲ್ಗೊಂಡು ಶ್ರೀಗಳ ದರ್ಶನ ಆಶೀರ್ವಾದ ಪಡೆದರು.

## ಕುರ್ಕಿ ಸ.ಪ್ರೌಢಶಾಲೆಯಲ್ಲಿ ಸ್ಮಾರ್ಟ್ ಕ್ಲಾಸ್ ರೂಮ್ ಉದ್ಘಾಟನೆ ಇಂದು

ದಾವಣಗೆರೆ ದಕ್ಷಿಣ ವಲಯದ ಕುರ್ಕಿ ಸರ್ಕಾರಿ ಪ್ರೌಢಶಾಲೆಗೆ ಇ.ಆರ್.ಎಂ. ಗ್ರೂಪ್ ಆಫ್ ಕಂಪನಿ (ಬೆಂಗಳೂರು) ಛೇರ್ಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಆರ್. ಪ್ರವೀಣ್ ಚಂದ್ರ ಅವರ ಸಹಕಾರದೊಂದಿಗೆ ದಾವಣಗೆರೆ ವಿದ್ಯಾನಗರ ರೋಟರಿ ಕ್ಲಬ್‌ನಿಂದ 1.5 ಲಕ್ಷ ರೂ. ವೆಚ್ಚದಲ್ಲಿ ಸ್ಮಾರ್ಟ್ ಕ್ಲಾಸ್ ರೂಮ್ ನಿರ್ಮಾಣವಾಗಿದ್ದು, ಇಂದು ಮಧ್ಯಾಹ್ನ 3 ಕ್ಕೆ ಜಿಲ್ಲಾ ಪಂಚಾಯ್ತಿ ಸಿಇಒ ಸುರೇಶ್ ಬಿ. ಇಟ್ನಾಳ್ ಅವರು ಉದ್ಘಾಟಿಸಲಿದ್ದಾರೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿದ್ಯಾನಗರ ರೋಟರಿ ಕ್ಲಬ್ ಅಧ್ಯಕ್ಷ ಎಸ್.ಎನ್. ಮಳವಳ್ಳಿ ವಹಿಸಲಿದ್ದಾರೆ. ಆರ್. ಪ್ರವೀಣ್ ಚಂದ್ರ, ದಾವಣಗೆರೆ ಜೋನ್ ಅಸಿಸ್ಟೆಂಟ್ ಗೌರ್ನರ್ ಎಂ. ಎನ್. ಬಿಲ್ಲಳ್ಳಿ, ಡಿಡಿಪಿಐ ಕೆ.ಸಿ. ಕೊಟ್ರೇಶ್, ಹಾವೇರಿ ಜಿಲ್ಲೆಯ ಶಿಕ್ಷಣಾಧಿಕಾರಿ ಕೆ.ಬಿ. ಮೀರಾ, ಕುರ್ಕಿ ಸರ್ಕಾರಿ ಪ್ರೌಢಶಾಲೆ ಎಸ್.ಡಿ.ಎಂ.ಸಿ. ಅಧ್ಯಕ್ಷ ಕೆ.ವಿ. ಓಂಕಾರಪ್ಪ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

## ಕಾಡಜ್ಜಿ : ಅಂತರ್ಜಲ ನಿರ್ವಹಣೆ ಕುರಿತು ಇಂದು - ನಾಳೆ ಕಾರ್ಯಾಗಾರ

ದಾವಣಗೆರೆ ತಾಲ್ಲೂಕಿನ ಕಾಡಜ್ಜಿ ಕೃಷಿ ತರಬೇತಿ ಕೇಂದ್ರದಲ್ಲಿ ಅಟಲ್ ಭೂಜಲ್ ಯೋಜನೆಯಡಿ ಇಂದಿನಿಂದ ಮೂರು ದಿನ ತರಬೇತಿ ಕಾರ್ಯಾಗಾರ ನಡೆಯಲಿದೆ. ಕಾರ್ಯಾಗಾರದಲ್ಲಿ ಅಂತರ್ಜಲ ನಿರ್ವಹಣೆ, ಜಲ ಭದ್ರತಾ ಯೋಜನೆ ಸಿದ್ಧಪಡಿಸುವುದು, ಸೂಕ್ಷ್ಮ ನೀರಾವರಿ ತಾಂತ್ರಿಕತೆಗಳು ಹಾಗೂ ನೀರಿನ ಮರು ಪೂರೈಕೆ ಬಗ್ಗೆ ತಿಳಿಸಲಾಗುವುದು. ವಿವರಕ್ಕೆ ಸಂಪರ್ಕಿಸಿ : 9844295795, 9901640184.

## ಬಂಕಾಪುರದ ನಂಜುಂಡಪ್ಪ ಹಿ. ಪ್ರಾ. ಶಾಲೆಯಲ್ಲಿ ಶಾಲಾ ವಾರ್ಷಿಕೋತ್ಸವ



ದಾವಣಗೆರೆ, ಫೆ. 12- ನಗರದ ಶ್ರೀ ಬಂಕಾಪುರದ ನಂಜುಂಡಪ್ಪ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲಾ ವಾರ್ಷಿಕೋತ್ಸವ ಆಚರಿಸಲಾಯಿತು.

ಶೇರ್ ಅಲಿ, ಮಲ್ಲಿಕಾರ್ಜುನ ಸ್ವಾಮಿ, ಶೌಕತ್ ಅಲಿ, ಜಿ.ವಿ. ಮಂಜಪ್ಪ, ಎಸ್.ವಿ. ಸುಧಾರಾಣಿ, ಗಂಗಪ್ಪ ಉಗರಕೋಡ್ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಶೈಲ ಜಗದ್ಗುರು ವಿದ್ಯಾಸಂಸ್ಥೆಯ ಉಪಾಧ್ಯಕ್ಷ ಎಸ್.ಎ. ಮುರುಗೇಶ್ ವಹಿಸಿದ್ದರು. ಕಾರ್ಯದರ್ಶಿ ಎಂ. ಬನ್ನಯ್ಯ ಸ್ವಾಮಿ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಲಿಂ. ಬಿ. ಅಶ್ವಿನಿ ಜ್ಞಾಪಕಾರ್ಥ ಚಿ. ಮಂಥನ್ ಹಿರೇಮಠ ಅವರು ಶಾಲಾ ಮಕ್ಕಳಿಗೆ ಉಚಿತ ನೋಟ್ ಪುಸ್ತಕ, ಜಾಮಿಟ್ರಿ, ಪೆನ್ನು, ಮತ್ತು ಪೆನ್ಸಿಲ್‌ಗಳನ್ನು ವಿತರಿಸಿದರು. ಬಿ.ಎ. ಬಿರಾದರ ವಂದಿಸಿದರು.

# ವಾಸ್ತುಶಿಲ್ಪ ಜ್ಞಾನಕ್ಕೆ ಇಟಗಿಯ ಇತಿವೃತ್ತ ಸಹಕಾರಿ



ಸಾಮಾಜಿಕ ಜಾಲತಾಣ ಹಾವಳಿಯಿಂದ ಮಕ್ಕಳಿಗೆ ದೇಶದ ಪರಂಪರೆ ಮತ್ತು ಇತಿಹಾಸದ ಬಗ್ಗೆ ಅರಿವಿಲ್ಲದಂತಾಗಿದೆ. ಇಂಥ ಕಾರ್ಯಕ್ರಮ ಗಳಿಗೆ ಮಕ್ಕಳನ್ನು ಕರೆತರಬೇಕು. ಇಟಗಿ ರಾಮೇ ಶ್ವರ ದೇವರ ಬ್ರಹ್ಮಕಲಶೋತ್ಸವಕ್ಕೆ ಬಂಟರ ಸಮುದಾಯದಿಂದ ನೆರವು ನೀಡಲಾಗುವುದು.

**- ದಿನೇಶ್ ಕೆ. ಶೆಟ್ಟಿ,** ದೂಡಾ ಅಧ್ಯಕ್ಷ

ಶೈವ-ವೈಷ್ಣವರು ಒಂದೇ ಎಂಬ ಸಂದೇಶ ವನ್ನು ಸಾರಲು ರಾಮ ಮತ್ತು ಈಶ್ವರರನ್ನು ಜತೆಗೆ ಪೂಜಿಸುವ ಪ್ರತೀತಿ ಇದೆ. ಧಾರ್ಮಿಕ ಕೇಂದ್ರಗಳ ಬಗ್ಗೆ ಪರಿಚಯಿಸಲು ದೇವಸ್ಥಾನಗಳಿಗೆ ಹೆಚ್ಚು ಜನರನ್ನು ಕರೆದೊಯ್ಯಬೇಕು.

**- ಶಶಿಕುಮಾರ್ ಮೆಹರ್ವಾಡೆ,** ತಪೋವನ ಸಮೂಹ ಸಂಸ್ಥೆ ಅಧ್ಯಕ್ಷ

**ದತ್ತಾತ್ರೇಯ ಭಟ್**

ದಾವಣಗೆರೆ, ಫೆ. 12- ಐತಿಹಾಸಿಕ ಮತ್ತು ಪೌರಾಣಿಕ ಕುರುಹುವಿನ ಜತೆಗೆ ಪ್ರಾಚೀನ ಕಾಲದ ವಾಸ್ತುಶಿಲ್ಪ ಜ್ಞಾನವನ್ನು 'ಇಟಗಿ ಇತಿವೃತ್ತ' ಪುಸ್ತಕ ನೀಡಲಿದೆ ಎಂದು ದೃಶ್ಯಕಲಾ ಮಹಾವಿದ್ಯಾಲಯ ಬೋಧಕ ದತ್ತಾತ್ರೇಯ ಭಟ್ ಹೇಳಿದರು.

ನಗರದ ರಾಷ್ಟ್ರೋತ್ಥಾನ ವಿದ್ಯಾಲಯದಲ್ಲಿ ನಿನ್ನೆ ಸಂಜೆ ನಡೆದ ಇತಿಹಾಸ ಪ್ರಸಿದ್ಧ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಇಟಗಿ ರಾಮೇಶ್ವರ ದೇವರ ಬ್ರಹ್ಮ ಕಲಶೋತ್ಸವದ ನಿಮಿತ್ತ ಲೇಖಕ ಅತೀಮರಡು ವಿಶ್ವೇಶ್ವರ ಅವರ ಶ್ರೀಕ್ಷೇತ್ರ ಇಟಗಿಯ ಇತಿಹಾಸ ಪುಸ್ತಕ 'ಇಟಗಿಯ ಇತಿವೃತ್ತ'ದ ಪರಿಚಯ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

14 ಅಂಶಗಳೊಂದಿಗೆ ಸಂಶೋಧನಾ ನೆಲೆಯಲ್ಲಿ ಬರೆದಿರುವ ಈ ಪುಸ್ತಕದಲ್ಲಿ ರಾಮೇಶ್ವರ ದೇವಾಲಯದ ಜತೆಗೆ ಸುತ್ತಲಿನ ಭಾರತೀಯ ದೇವಾಲಯ ಸಂಸ್ಕೃತಿಯ ಬಗ್ಗೆ ಲೇಖಕರು ವಿವರಿಸಿದ್ದಾರೆ. ವಿಜಯನಗರ ಶೈಲಿಯ ಇಟಗಿಯ ರಾಮೇಶ್ವರ ದೇವಸ್ಥಾನದಲ್ಲಿ ಚಂದ್ರಶೇಖರ, ಆಲಿಂಗನ ಚಂದ್ರಶೇಖರ ಹಾಗೂ ಉಮಾ ಸಹಿತ ಚಂದ್ರಶೇಖರ ಮೂರ್ತಿಗಳಿವೆ. ಷಡಾಧಾರ ಕರ್ಮದಲ್ಲಿ 6 ಮನೆಯ ಕ್ರಮಗಳಲ್ಲಿ ಲಿಂಗ ಪ್ರತಿಷ್ಠಾಪನೆ ಮಾಡಿರುವುದು, ದೇವಸ್ಥಾನದ ವಾಸ್ತು ವಿನ್ಯಾಸ ಮತ್ತು ನಕಾಶೆ ಹೇಗಿರಬೇಕೆಂಬ ವಿವರಣೆ ಯುಳ್ಳ ಈ ಪುಸ್ತಕದಿಂದ ಶಿಲ್ಪಕಲೆಯನ್ನು ಅಧ್ಯಯನ ಮಾಡಲು ಸಹಕಾರಿಯಾಗಲಿದೆ ಎಂದು ಹೇಳಿದರು.

ಸೋಮ, ಶರಾವತಿ, ಅಘನಾಶಿನಿ ನದಿಗಳು ಹಾಗೂ ಪರ್ವತ ಶ್ರೇಣಿಯಿಂದ ಕೂಡಿರುವ ಇಟಗಿ ಕ್ಷೇತ್ರವು ಅಯೋಧ್ಯೆ ನಗರಕ್ಕೆ ಹೋಲುವಂತಿದೆ. ಇದು ದೇವ ಭೂಮಿಯ ಲಕ್ಷಣಗಳನ್ನು ಹೊಂದಿದೆ. ಈ ಕ್ಷೇತ್ರದ ಬಗ್ಗೆ ಶಿವರಾಮ ಕಾರಂತರು ಸೇರಿ ಅನೇಕ ವಿದ್ವಾಂಸರು ಉಲ್ಲೇಖಿಸಿದ್ದಾರೆ. ಆದರೆ, ಇಟಗಿ ರಾಮೇಶ್ವರ ದೇವರ ವಿಶೇಷ ಉಲ್ಲೇಖ ಇರುವ ಈ ಪುಸ್ತಕವು ಮಹತ್ವದ್ದಾಗಿದೆ ಎಂದರು.

ಜಾನಪದ ಪರಂಪರೆಯಿಂದ ದೇವಸ್ಥಾನಗಳ ಪರಿಚಯ ಹೆಚ್ಚಾಗಲಿದೆ. ಹಾಗಾಗಿ, ಲೇಖಕರು ಈ ಪುಸ್ತಕದಲ್ಲಿ ಕೆಲ ಪದ್ಯಗಳ ಜತೆಗೆ ಅಲ್ಲಿಗೆ ಭೇಟಿ ನೀಡಿರುವ ಭಕ್ತರ ಅನುಭವವನ್ನು ದಾಖಲಿಸಿದ್ದರೆ ಹೆಚ್ಚು ಉಪಯುಕ್ತವಾಗಿರುತ್ತಿತ್ತು ಎಂದು ವಿಶ್ಲೇಷಿಸಿದರು.

ಕ್ಷ-ಕಿರಣ ತಜ್ಞ ಡಾ.ಎಸ್.ಆರ್. ಹೆಗಡೆ ಮಾತನಾಡಿ, ಏಪ್ರಿಲ್ ಮೊದಲ ವಾರದಲ್ಲಿ ಇಟಗಿ ರಾಮೇಶ್ವರ ದೇವರ ಬ್ರಹ್ಮಕಲಶೋತ್ಸವ ನೆರವೇರಲಿದ್ದು, ಇದಕ್ಕೆ ಆರ್ಥಿಕ ನೆರವು ನೀಡಬೇಕು ಹಾಗೂ ಎಲ್ಲರೂ ದೇವಸ್ಥಾನಕ್ಕೆ ಬಂದು ಭಗವಂತನ ಕೃಪೆಗೆ ಪಾತ್ರರಾಗಬೇಕು ಎಂದರು.

ಬಾಪೂಜಿ ವಿದ್ಯಾಸಂಸ್ಥೆ ನಿರ್ದೇಶಕ ಸಂಪನ್ನ ಮುತಾಲಿಕ್ ಮಾತನಾಡಿ, ಸುಮಾರು 15 ರೆರೆನ್ಸ್ ಮೂಲಕ ದೇವಸ್ಥಾನದ ಗರ್ಭಗುಡಿ, ಪೀಠ, ದೀಪ ಸ್ತಂಭ ಯಾವ್ಯಾವ ದಿಕ್ಕಿನಲ್ಲಿರಬೇಕೆಂಬುದರ ಬಗ್ಗೆ ವಿವರಿಸಿರುವುದು ಸ್ತುತಾರ್ಹವಾಗಿದೆ ಎಂದರು.

ವಿಕ ಸ್ಥಾನಿಕ ಸಂಪಾದಕ ಸದಾನಂದ ಹೆಗಡೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ದೂಡಾ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ, ಬಾತಿಯ ತಪೋವನ ಸಮೂಹ ಸಂಸ್ಥೆಯ ಛೇರ್ಮನ್ ಶಶಿಕುಮಾರ್ ಮೆಹರ್ವಾಡೆ, ವಕೀಲ ಅರುಣ್ ಹೆಗಡೆ, ಉದ್ಯಮಿ ಎಸ್.ಟಿ. ಕುಸುಮ ಶ್ರೇಷ್ಠಿ ಮತ್ತು ಇತರರು ಉಪಸ್ಥಿತರಿದ್ದರು.

## ಕಾರಿಗನೂರಿನ ವಿಎಸ್ಸೆಸ್ಸೆನ್ ಅಧ್ಯಕ್ಷರಾಗಿ ಟಿ.ಕೆ. ವೀರಪ್ಪ



ದಾವಣಗೆರೆ, ಫೆ.12- ಕಾರಿಗನೂರಿನ ವ್ಯವಸಾಯ ಸೇವಾ ಸಹಕಾರ ಸಂಘದ ಅಧ್ಯಕ್ಷರಾಗಿ ಟಿ.ಕೆ. ವೀರಪ್ಪ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

## ಕುರಿ - ಮೇಕೆ ಸಾಕಾಣಿಕೆ ತರಬೇತಿ

ದಾವಣಗೆರೆ, ಫೆ.12- ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿಯು ನಾಡಿದ್ದು ದಿನಾಂಕ 14 ಮತ್ತು 15 ರಂದು ನಡೆಯಲಿದೆ. ವಿವರಕ್ಕೆ ಸಂಪರ್ಕಿಸುವ ದೂರವಾಣಿ 08192-233787.

## ನಗರದ ಶಾರದಾಂಬ ದೇವಸ್ಥಾನದಲ್ಲಿ ನಾಳೆಯಿಂದ ವಾರ್ಷಿಕೋತ್ಸವ



ದಾವಣಗೆರೆ, ಫೆ.12- ನಗರದ ಎಸ್. ನಿಜಲಿಂಗಪ್ಪ ಬಡಾವಣೆಯಲ್ಲಿರುವ ಶ್ರೀ ಗಣಪತಿ, ಶಾರದಾಂಬ, ಚಂದ್ರಮೌಳೇಶ್ವರ ಮತ್ತು ಶಂಕರಾಚಾರ್ಯರ ದೇವಸ್ಥಾನಗಳ 16ನೇ ವಾರ್ಷಿಕೋತ್ಸವ ಸಮಾರಂಭದ ಅಂಗವಾಗಿ ನಾಡಿದ್ದು ದಿನಾಂಕ 14 ಮತ್ತು 15ರಂದು ಶಂಕರ ಸಮುದಾಯ ಭವನದಲ್ಲಿ ವಿಶೇಷ ಕಾರ್ಯಕ್ರಮ ಆಯೋಜಿಸಲಾಗಿದೆ.

ದಿನಾಂಕ 14ರ ಬೆಳಗ್ಗೆ 7.30ರಿಂದ ಮಂಗಳವಾದ್ಯ, ಕಲಶ ಸ್ಥಾಪನೆ, ಗಣಪತಿ ಮತ್ತು ಚಂದ್ರಮೌಳೇಶ್ವರರಿಗೆ ಅಭಿಷೇಕ, ಶಾರದಾಂಬ ಮೂರ್ತಿಗೆ ಸಹಸ್ರನಾಮ ಅರ್ಚನೆ, ಶ್ರೀಚಕ್ರ ಪೂಜೆ, ಸಪ್ತಶತಿ ಪಾರಾಯಣ, ಗಣ ಹೋಮ ಸೇರಿದಂತೆ ಪೂಜಾ ಕಾರ್ಯಗಳು ನೆರವೇರಲಿದ್ದು, ಮಧ್ಯಾಹ್ನ 12 ಗಂಟೆಗೆ ಪೂರ್ಣಾಹುತಿ ಮಂಗಳಾರತಿ ನಡೆಯಲಿದೆ.

ದಿನಾಂಕ 14 ಮತ್ತು 15ರ ಸಂಜೆ 6ಕ್ಕೆ ಅದ್ವೈತ ಪ್ರತಿಷ್ಠಾನದ ಅಧ್ಯಕ್ಷ, ಅಧ್ಯಾತ್ಮಿಕ ಚಿಂತಕ ಡಾ. ಪಾವಗಡ ಪ್ರಕಾಶ್ ರಾವ್ ಅವರಿಂದ ಉಪನ್ಯಾಸ ಕಾರ್ಯಕ್ರಮ ನಡೆಯಲಿದ್ದು, ಸಂಜೆ 7.30ಕ್ಕೆ ಶಾರದಾಂಬ ದೇವಿಗೆ ಪಾಲಕಿ ಉತ್ಸವ, ಅಷ್ಟಾವಧಾನ ಮಂಗಳಾರತಿ ಮತ್ತು ಪ್ರಸಾದ ವಿನಿಯೋಗ ಜರುಗಲಿದೆ.

ಫೆ.15ರ ಬೆಳಗ್ಗೆ 7ರಿಂದ ಕಲಾಹೋಮ, ಬೆಳಗ್ಗೆ 9ಕ್ಕೆ ಪೂರ್ಣಾಹುತಿ, 9:30ರಿಂದ ಗಣಪತಿ ಮೂಲ ವಿಗ್ರಹಕ್ಕೆ ಅಥರ್ವ ಶೀರ್ಷದಿಂದ ಅಭಿಷೇಕ, ರುದ್ರಾಭಿಷೇಕ, ಶ್ರೀಚಕ್ರ ಪೂಜೆ ನಡೆಯಲಿದ್ದು, ಮಧ್ಯಾಹ್ನ 12.30ರ ನಂತರ ಅನ್ನ ಸಂತರ್ಪಣೆ ಜರುಗಲಿದೆ.

## ತಾತ್ಕಾಲಿಕ ಸರ್ಕಾರಿ ಬಸ್ ನಿಲ್ದಾಣ ತೆರವು



ದಾವಣಗೆರೆ, ಫೆ.12- ಕ್ರೀಡಾಪಟುಗಳಿಗೆ ತೊಂದರೆಯಾಗಿ ಪರಿಣಮಿಸಿದ್ದ ನಗರದ ಹೈಸ್ಕೂಲ್ ಮೈದಾನದಲ್ಲಿ ತಾತ್ಕಾಲಿಕವಾಗಿ ನಿರ್ಮಿಸಿದ್ದ ಸರ್ಕಾರಿ ಬಸ್ ನಿಲ್ದಾಣವನ್ನು ಜಿಲ್ಲಾ ಕ್ರೀಡಾಪಟುಗಳ ಸಂಘದ ಅಧ್ಯಕ್ಷರೂ, ದೂಡಾ ಅಧ್ಯಕ್ಷರೂ ಆದ ದಿನೇಶ್ ಕೆ. ಶೆಟ್ಟಿ ಅವರು ಜೆಸಿಬಿ ಚಲಾಯಿಸುವ ಮುಖಾಂತರ ತೆರವು ಕಾರ್ಯಕ್ಕೆ ಇಂದು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಕ್ರೀಡಾಪಟುಗಳಾದ ತಿಮ್ಮೇಶ್, ಪರಶುರಾಮ್ ಗೋಪಾಲ್, ಚೇತನ್ ಅಜ್ಜಂಪೂರ್, ಬಕ್ಕೇಶ್, ದಿವಾಕರ್, ಶಿವರಾಜ್, ಸತೀಶ್ ಶೆಟ್ಟಿ, ಯುವರಾಜ್ ಇನ್ನೂ ಮುಂತಾದವರು ಇದ್ದರು

## 17ಕ್ಕೆ ಆವರಗೊಳ್ಳ ವೀರಭದ್ರ ಸ್ವಾಮಿ ರಥೋತ್ಸವ

ದಾವಣಗೆರೆ ಸಮೀಪದ ಆವರಗೊಳ್ಳ ಗ್ರಾಮದ ಶ್ರೀ ವೀರಭದ್ರೇಶ್ವರ ಸ್ವಾಮಿಯ ರಥೋತ್ಸವವು ಇದೇ ದಿನಾಂಕ 17ರಂದು ಜರುಗಲಿದೆ.

ಇಂದು ರಾತ್ರಿ 9ಕ್ಕೆ 'ಬಸವೇಶ್ವರ ಆರೋಹಣ ಉತ್ಸವ', 14ರ ಶುಕ್ರವಾರ ರಾತ್ರಿ 9 ಗಂಟೆಗೆ ಸರ್ಪಾ ರೋಹಣ ಉತ್ಸವ ನಡೆಯಲಿವೆ.


**ಗಾಯತ್ರಿ ಬಾಯಿ ಕೆ. ನಿಧನ**



ದಾವಣಗೆರೆ ಸಿಟಿ ಸಿದ್ದವೀರಪ್ಪ ಬಡಾವಣೆ, 14ನೇ ಕ್ರಾಸ್ ವಾಸಿ ದಿ. ತಿಪ್ಪೋಜಿರಾವ್ ಜಾಧವ್ ಇವರ ಧರ್ಮಪತ್ನಿ **ಗಾಯತ್ರಿ ಬಾಯಿ ಕೆ.** (64) ಇವರು ದಿನಾಂಕ 12.02.2025ರ ಬುಧವಾರ ಸಂಜೆ 6ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತಾಯಿ, ಸಹೋದರರು, ಸಹೋದರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 13.02.2025ರ ಗುರುವಾರ ಮಧ್ಯಾಹ್ನ 12 ಕ್ಕೆ ನಗರದ ಪಿ.ಬಿ. ರಸ್ತೆಯ ವೈಕುಂಠಧಾಮದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ, ಮೊ. : 98447 36220**

**ಭಾವಪೂರ್ಣ ಶ್ರದ್ಧಾಂಜಲಿ**



ದಿ. ಅಂದನೂರು ಶಿವಯೋಗಪ್ಪನವರ (ಬಟ್ಟೆ ಅಂಗಡಿ) ದ್ವಿತೀಯ ಪುತ್ರ **ಶ್ರೀ ಅಂದನೂರು ಜಯರಾಜ್** ಅವರು, ದಿನಾಂಕ 05.02.2025ರ ಬುಧವಾರ ನಿಧನರಾಗಿದ್ದು, ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಭಗವಂತನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.

**ಅಂದನೂರು ಬಳಗ (ರಿ.)**

|| ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ || || ಶ್ರೀ ಕೋಗುಂಡೆ ಬಸವೇಶ್ವರ ಪ್ರಸನ್ನ ||

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ದಾವಣಗೆರೆ ತಾ. ಶಿರಮಗೊಂಡನಹಳ್ಳಿ ಗ್ರಾಮದ ವಾಸಿ **ಶ್ರೀಮತಿ ಸೌಭಾಗ್ಯಮ್ಮ** ಇವರು ಮಾಡುವ ವಿಜ್ಞಾಪನೆಗಳು. ದಿನಾಂಕ : 05.02.2025ನೇ ಬುಧವಾರ ರಾತ್ರಿ 11 ಕ್ಕೆ ನನ್ನ ಪೂಜ್ಯ ಪತಿಯಾದ **ಶ್ರೀ ಕೆ.ಜೆ. ರೇವಣಸಿದ್ದಪ್ಪ** ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **ಕೈಲಾಸ ಶಿವಗಣಾರಾಧನೆ'ಯನ್ನು** ದಿನಾಂಕ : 13.02.2025ನೇ ಗುರುವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆ ತಾಲ್ಲೂಕು ಶಿರಮಗೊಂಡನಹಳ್ಳಿಯಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

**ದುಃಖತಪ್ತರು :** ಶ್ರೀಮತಿ ಸೌಭಾಗ್ಯಮ್ಮ ಮತ್ತು ಮಕ್ಕಳು, ಮೊಮ್ಮಕ್ಕಳು, ಸಹೋದರರು ಮತ್ತು ಸಹೋದರಿಯರು, ಕೋಟೆಹಾಳ್ ವಂಶಸ್ಥರು, (ಕರಿಯಪ್ಪವಂಶಸ್ಥರು) ಮತ್ತು ಶಿರಮಗೊಂಡನಹಳ್ಳಿ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು. ಮೊ. : 99458 57710, 98443 73648

ವಿ.ಸೂ. : ವಿಶೇಷ ಆಹ್ವಾನ ಪತ್ರಿಕೆ ತಲುಪದೇ ಇರುವವರು, ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

**ಒಂಭತ್ತನೇ ವರ್ಷದ ಪುಣ್ಯಸ್ಮರಣೆ**



**ಟಿ.ಎಸ್. ಶಿವಾನಂದಯ್ಯ**
**(ಮಸಾಲೆ ಮಂಡಕ್ಕಿ ಮಂಜಣ್ಣ)**

ನೀವು ನಮ್ಮನ್ನಗಲಿ ಇಂದಿಗೆ ಒಂಭತ್ತು ವರ್ಷ. ಸದಾ ನಿಮ್ಮ ನೆನಪು ಹಾಗೂ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ ಮತ್ತು ಸದಾ ನಿಮ್ಮ ಸ್ಮರಣೆಯಲ್ಲಿರುವ ;

**ಪತ್ನಿ : ಶ್ರೀಮತಿ ಶಾರದಮ್ಮ**
**ಪುತ್ರಿಯರು-ಅಳಿಯಂದಿರು : ಶ್ರೀಮತಿ ಮಂಜುಳ ಶ್ರೀ ಹೆಚ್.ಕೆ. ಚನ್ನಬಸಪ್ಪ (ಚಂದ್ರು)**
**ಶ್ರೀಮತಿ ವೀರಮ್ಮ ಶ್ರೀ ಚಂದ್ರಮೌಳಿ**
**ಮಗ-ಸೊಸೆ: ಶ್ರೀ ಶಿವಶಂಕರ್ ಶ್ರೀಮತಿ ಗೌರಮ್ಮ**
**ಮತ್ತು ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು. ಮೊ: 95132 09905**


## ನಗರದಲ್ಲಿ ಕೊಟ್ಟೂರೇಶ್ವರ ಸ್ವಾಮಿ ಪ್ರವಚನ

ದಾವಣಗೆರೆಯ ಕೊಟ್ಟೂರು ಶ್ರೀ ಗುರು ಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ವತಿಯಿಂದ ಭಕ್ತರು ಪಾದಯಾತ್ರೆ ಕೈಗೊಳ್ಳುವ ಮುನ್ನ ವಿರಕ್ತಮಠದ ಆವರಣದಲ್ಲಿ ಇಂದಿನಿಂದ ಇದೇ ದಿನಾಂಕ 17 ರವರೆಗೆ ಪ್ರತಿ ದಿನ ಸಂಜೆ 6 ರಿಂದ 8.30 ರವರೆಗೆ ಶ್ರೀ ಕೊಟ್ಟೂರು ಗುರು ಬಸವೇಶ್ವರರ ಪುರಾಣ-ಪ್ರವಚನ ಮರೋಳ ಹಿರೇಮಠದ ಮುದುಕಯ್ಯ ಶಾಸ್ತ್ರಿಗಳು ಪ್ರವಚನ ನಡೆಸಿಕೊಡಲಿದ್ದಾರೆ.

## ಕೆ.ಎಂ. ಸುರೇಶ್ ಅವರಿಗೆ 'ವರ್ಷದ ವ್ಯಕ್ತಿ' ಪ್ರಶಸ್ತಿ



ದಾವಣಗೆರೆ, ಫೆ 12- ಜಿಲ್ಲೆ ಸಮಾಚಾರ ಪತ್ರಿಕಾ ಬಳಗದ ವತಿಯಿಂದ 'ವರ್ಷದ ವ್ಯಕ್ತಿ-2024' ರ ಪ್ರಶಸ್ತಿಗೆ ನಗರದ ಶ್ರೀ ಸೋಮೇಶ್ವರ ಸಮೂಹ ಸಂಸ್ಥೆಗಳ ಸಂಸ್ಥಾಪಕರೂ, ದೂಡಾ ಮಾಜಿ ಅಧ್ಯಕ್ಷರೂ ಆದ ಕೆ.ಎಂ. ಸುರೇಶ್ ಅವರು ಭಾಜನರಾಗಿದ್ದು, ನಾಳೆ ದಿನಾಂಕ 13 ರಂದು ಸಂಜೆ 5.30 ಕ್ಕೆ ಕುವೆಂಪು ಕನ್ನಡ ಭವನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ಬಳಗದ ಕೆ. ರಾಘವೇಂದ್ರ ನಾಯರಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸುರೇಶ್ ಅವರು ಶಿಕ್ಷಣ, ಆರೋಗ್ಯ, ಸಮಾಜ ಸೇವಾ ಕ್ಷೇತ್ರಗಳಲ್ಲಿ ಗಮನಾರ್ಹ ಸೇವೆ ಸಲ್ಲಿಸಿರುವುದನ್ನು ಪರಿಗಣಿಸಿ, ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ ಎಂದು ಅವರು ಹೇಳಿದರು.

ವಾಗ್ಮಿ ಪ್ರೊ. ಎಂ.ಕೃಷ್ಣೇಗೌಡ ಪ್ರಶಸ್ತಿ ಪ್ರದಾನ ಮಾಡು ವರು. ಹಿರಿಯ ನ್ಯಾಯವಾದಿ ರಾಮಚಂದ್ರ ಕಲಾಲ್ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಕಸಾಪ ಜಿಲ್ಲಾಧ್ಯಕ್ಷ ಕೆ. ವಾಮದೇವಪ್ಪ, ಸರ್‌ಎಂವಿ ವಿದ್ಯಾಸಂಸ್ಥೆ ಕಾರ್ಯದರ್ಶಿ ಎಸ್.ಜೆ. ಶ್ರೀಧರ್, ಮಾಜಿ ಶಾಸಕ ಎಸ್.ವಿ. ರಾಮಚಂದ್ರ, ಸ್ವಾಭಿಮಾನಿ ಬಳಗದ ರಾಜ್ಯಾಧ್ಯಕ್ಷ ಜಿ.ಬಿ. ವಿನಯಕುಮಾರ್, ಜಿಲ್ಲೆ ಸಮಾಚಾರ ಪತ್ರಿಕಾ ಬಳಗದ ಸಂಸ್ಥಾಪಕ ವಿ.ಹನುಮಂತಪ್ಪ ಭಾಗವಹಿಸಲಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಪತ್ರಿಕಾ ಬಳಗದ ಆನಂದ ತೀರ್ಥಚಾರ್, ಟಿ.ಎಸ್. ಶೈಲಜಾ, ಮಹಾಂತೇಶ್ ವಿ. ಒಣರೊಟ್ಟಿ, ಶ್ರೀಮತಿ ಹೆಚ್. ಭಾರತಿ ಉಪಸ್ಥಿತರಿದ್ದರು.

## ಹರಿಹರದಲ್ಲಿ ನಾಳೆ ದೂಡಾ ಜನ ಸಂಪರ್ಕ ಸಭೆ

ದಾವಣಗೆರೆ, ಫೆ. 12- ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಾಡಿದ್ದು ದಿನಾಂಕ 14ರ ಶುಕ್ರವಾರ ಬೆಳಿಗ್ಗೆ 11 ರಿಂದ ಮಧ್ಯಾಹ್ನ 2 ರವರೆಗೆ ಹರಿಹರ ನಗರಸಭೆ ಆವರಣದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ಜನ ಸಂಪರ್ಕ ಸಭೆಯನ್ನು ಏರ್ಪಡಿಸಲಾಗಿದೆ ಎಂದು ದೂಡಾ ಆಯುಕ್ತ ಹುಲ್ಮನೆ ತಿಮ್ಮಣ್ಣ ತಿಳಿಸಿದರು.


**ಇಟಗಿ ಬಸಪ್ಪ ನಿಧನ**



ದಾವಣಗೆರೆ ಸಿಟಿ ಲೇಬರ್ ಕಾಲೋನಿ 10ನೇ ಕ್ರಾಸ್ ವಾಸಿ ದಿ. ಶಿವಪುತ್ರಮ್ಮನವರ ಪತಿ ಇಟಗಿ ಬಸಪ್ಪ (94) ಇವರು ದಿನಾಂಕ 12.02.2025ರ ಬುಧವಾರ ಸಂಜೆ 6.15ಕ್ಕೆ ನಿಧನರಾದರು. ಮೂವರು ಪುತ್ರರು, ನಾಲ್ವರು ಪುತ್ರಿಯರು, ಅಳಿಯಂದರು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 13.2.2025ರ ಗುರುವಾರ ಬೆಳಿಗ್ಗೆ 10:30ಕ್ಕೆ ಬೂದಾಳ್ ರಸ್ತೆಯ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

**ಅಶೋಕ್ ಕುಮಾರ್ ಪಿ.ವಿ. ನಿಧನ**



ದಾವಣಗೆರೆ ಲೇಬರ್ ಕಾಲೋನಿ ನಿವಾಸಿ ವೀರಭದ್ರೇಶ್ವರ ಕಿರಾಣಿ ಅಂಗಡಿ ಮಾಲೀಕರಾದ ಅಶೋಕ್ ಕುಮಾರ್ ಪಿ.ವಿ. (56) ಇವರು ದಿನಾಂಕ 12.02.2025ರ ಬುಧವಾರ ರಾತ್ರಿ 10 ಗಂಟೆಗೆ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ, ಸಹೋದರ, ಸಹೋದರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 13.2.2025ರ ಗುರುವಾರ ಮಧ್ಯಾಹ್ನ 3 ಗಂಟೆಗೆ ಗಾಂಧಿನಗರದ ಹಿಂದೂ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.


## 'ಶಿವರಾತ್ರಿ ಉತ್ಸವ' ಪ್ರತಿಭೆಗಳ ಕಲಾ ಪ್ರದರ್ಶನಕ್ಕೆ ಅವಕಾಶ

ದಾವಣಗೆರೆ,ಫೆ.12- ನಗರದ ವಿನಾಯಕ ಎಜುಕೇಷನ್ ಟ್ರಸ್ಟ್, ಅಥಣಿ ಹಾಗೂ ಎಸ್‌ಬಿಸಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಮತ್ತು 'ಚಿರಂತನ' ಸಂಸ್ಥೆ ಇವರುಗಳ ಸಂಯುಕ್ತಾಶ್ರಯದಲ್ಲಿ ಇದೇ ದಿನಾಂಕ 26 ರಂದು ಸಂಜೆ 7 ರಿಂದ 11.30 ರ ವರೆಗೆ ಅಥಣಿ ಕಾಲೇಜಿನ ಆವರಣದಲ್ಲಿ 'ಶಿವರಾತ್ರಿ ಉತ್ಸವ' ದಲ್ಲಿ ನಗರದ ಪ್ರತಿಭಾನ್ವಿತ ಕಲಾವಿದರಿಗೆ ಅವಕಾಶ ಕಲ್ಪಿಸಲಾಗಿದೆ.

3 ವರ್ಷ ಮೇಲ್ಪಟ್ಟ ಮಕ್ಕಳಿಂದ ಹಿಡಿದು ವಯೋವೃದ್ಧರು ತಮ್ಮ ಸಂಗೀತ, ನೃತ್ಯ ಪ್ರತಿಭೆ ಪ್ರದರ್ಶಿಸಬಹುದು. ಹೆಸರು ನೋಂದಾಯಿಸಲು ಇದೇ ದಿನಾಂಕ 20 ಕೊನೆಯ ದಿನವಾಗಿದೆ.

ಈ ಉತ್ಸವದಲ್ಲಿ ಭಾಗವಹಿಸುವವರು ಮೊದಲು ತಮ್ಮ ಕಲಾ ಪ್ರದರ್ಶನದ 2-3 ನಿಮಿಷದ ವಿಡಿಯೋವನ್ನು ಚಿರಂತನದ ವಾಟ್ಸಾಪ್ ನಂಬರ್ 9535656163 ಗೆ ಕಳುಹಿಸಬೇಕು. ತೀರ್ಪುಗಾರರು ಆಯ್ಕೆ ಮಾಡುವ ಕಲಾವಿದರು, ಕಲಾ ತಂಡಕ್ಕೆ ಮಾತ್ರ ಅಂದು ಅವಕಾಶ ನೀಡಲಾಗುವುದು.

# ಜನತಾ ವಾಣಿ

ಸಂಪಾದಕರು :
ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಫೆಬ್ರವರಿ 13, 2025





ಭರಮಸಾಗರದಲ್ಲಿ ಬುಧವಾರ ನಡೆದ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಅವರ ಬೆಳ್ಳಿ ಪಲ್ಲಕ್ಕಿಯ ಮೆರವಣಿಗೆ, ಭಕ್ತರ ಜಯಘೋಷದ ನಡುವೆ ವಿಜೃಂಭಣೆಯಿಂದ ನಡೆಯಿತು.

# ದೇಶದ ಪರಂಪರೆ ಉಳಿದಿರುವುದೇ ಮಠಗಳಿಂದ

**ಮೈಸೂರು ಲೋಕಸಭಾ ಸದಸ್ಯ ಯದುವೀರ್ ಒಡೆಯರ್**

ಭರಮಸಾಗರ, ಫೆ. 12- ಮೈಸೂರು ಅರಮನೆಗೂ ಸಿರಿಗೆರೆ ತರಳಬಾಳು ಮಠಕ್ಕೂ ಅವಿನಾಭಾವ ಸಂಬಂಧವಿದೆ. ಈ ಸಂಬಂಧ ಮುಂದೆನೂ ಕೂಡ ಇರುತ್ತದೆ. ಭಾರತೀಯ ಪರಂಪರೆ, ಸಂಸ್ಕೃತಿ, ಸಂಸ್ಕಾರ ಉಳಿದಿರುವುದೇ ಮಠಗಳಿಂದ ಎಂದು ಮೈಸೂರು ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಇಲ್ಲಿ ನಡೆಯುತ್ತಿರುವ ತರಳಬಾಳು ಹುಣ್ಣಿಮೆ ಮಹೋತ್ಸವದ ಕೊನೆಯ ದಿನದ ಕಾರ್ಯಕ್ರಮದಲ್ಲಿ '250 ಶರಣರ 22 ಸಾವಿರ ವಚನಗಳ ವಚನ ಸಂಪುಟದ ತಂತ್ರಾಂಶ' ಬಿಡುಗಡೆ ಮಾಡಿ ಮಾತನಾಡಿದರು.

ಅಂದಿನ ನಮ್ಮ ರಾಜರು ಜನರ ಕಲ್ಯಾಣಕ್ಕಾಗಿ ಅನೇಕ ನೀರಾವರಿ ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿದ್ದರು. ಇಂದು ತರಳಬಾಳು ಜಗದ್ಗುರು ಕೆರೆಗಳಿಗೆ ನೀರು ತುಂಬಿಸುವ ಮಹತ್ಕಾರ್ಯವನ್ನು ಮಾಡುತ್ತಿರುವುದು ಶ್ಲಾಘನೀಯ ಎಂದರು.

ಧರ್ಮಕ್ಕಾಗಿ ಭಾರತೀಯ ತ್ಯಾಗ ಮಾಡಿದ್ದು, ಧರ್ಮ ಸಂರಕ್ಷಣೆಗಾಗಿ ದುಡಿದ್ದಾರೆ. ಭಾರತೀಯರ ಪರಿಶ್ರಮದಿಂದ ಇನ್ನೂ ಪರಂಪರೆ, ಸಂಸ್ಕೃತಿ, ಸಂಸ್ಕಾರ ಉಳಿದಿದೆ ಎಂದು ಹೇಳಿದರು.

ಭಾರತೀಯ ಪರಂಪರೆಗೆ ಕರ್ನಾಟಕದ ಕೊಡುಗೆ ಅಪಾರವಾದುದು. ಪ್ರತಿಯೊಬ್ಬ ಭಾರತೀಯರು ಕನ್ನಡಿಗರಲ್ಲ. ಆದರೆ ಪ್ರತಿಯೊಬ್ಬ ಕನ್ನಡಿಗರು ಭಾರತೀಯರು. ಪರಂಪರೆ, ಸಂಸ್ಕೃತಿಯ ರಕ್ಷಣೆಗಾಗಿ ಪ್ರತಿಯೊಬ್ಬರೂ ನಿಲ್ಲಬೇಕಾಗಿದೆ. ಪ್ರಥಮ ಕರ್ತವ್ಯ ಕೂಡ ಆಗಬೇಕು ಎಂದರು.

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ರಾಜರಾಗಿರುವ ಕಾರಣ ಧರ್ಮ, ಪರಂಪರೆ ರಕ್ಷಣೆ ಮಾಡುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ದಕ್ಷಿಣ ಭಾರತದಲ್ಲಿ ಧರ್ಮ ರಕ್ಷಣೆಗೆ ನಿಂತಿರುವುದು ಕರ್ನಾಟಕ. ಹನ್ನೆರಡನೇ ಶತಮಾನದ ವಚನಕಾರರ ವಚನ ಗಳು ಇಂದಿಗೂ ಪ್ರಸ್ತುತ ಎಂದು ಹೇಳಿದರು.

ಉತ್ತಮ ಸಮಾಜ ನಿರ್ಮಾಣಕ್ಕೆ ಎಲ್ಲರೂ ಕಂಕಣಬದ್ಧರಾಗಬೇಕಾಗಿದೆ. ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ನಮ್ಮ ಪ್ರಾಚೀನ ಗ್ರಂಥಗಳ ಸಂರಕ್ಷಣೆಗಾಗಿ ಅನುದಾನ ಘೋಷಣೆ ಮಾಡಿದೆ ಎಂದರು.

ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, ಕೆರೆಗಳಿಗೆ ನೀರು ತುಂಬಿಸುವ ಮೂಲಕ ಬರದ ನಾಡಿಗೆ ಶಾಶ್ವತ ಪರಿಹಾರ ನೀಡುವಲ್ಲಿ ತರಳಬಾಳು ಜಗದ್ಗುರು ಗಳ ಅವಿರತ ಶ್ರಮ ಶ್ಲಾಘನೀಯ ಎಂದರು.

ಸಮಾಜದಲ್ಲಿ ಜಾಗೃತಿ ಮೂಡಿಸುವ ಕೆಲಸದ ಜೊತೆಗೆ ನ್ಯಾಯಾಲಯಗಳಲ್ಲಿ ಬಗೆಹರಿಯದ ವ್ಯಾಜ್ಯಗಳು, ಸಮಸ್ಯೆಗಳಿಗೆ ತರಳಬಾಳು ಸದ್ಧರ್ಮ ನ್ಯಾಯ ಪೀಠದ ಮೂಲಕ ಮಹತ್ವದ ಪರಿಹಾರ ನೀಡಿದ ಅನೇಕ ಉದಾಹರಣೆಗಳಿವೆ. ತರಳಬಾಳು ಹುಣ್ಣಿಮೆ ಮಹೋತ್ಸವದಲ್ಲಿ ಅನೇಕ ವಿಚಾರಗಳ ಬಗ್ಗೆ ಚಿಂತನ-ಮಂಥನ ನಡೆಸಿ, ಭಕ್ತ ಸಮೂಹಕ್ಕೆ ಜ್ಞಾನದ ದಾಸೋಹ ಉಣಬಡಿಸಿದ್ದಾರೆ ಎಂದು ಹೇಳಿದರು.

ವಿಜ್ಞಾನ ಮತ್ತು ಧರ್ಮ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ರೈತನದು ಬಯಲು ಕಾರ್ಖಾನೆ. ಆದರೆ ಬಂಡವಾಳಗಾರನ ಕಟ್ಟಡದ ಒಳಗೆ ನಿರ್ಮಾಣವಾಗಿರುವ ಕಾರ್ಖಾನೆಗೆ ಎಲ್ಲಾ ರೀತಿಯ ವ್ಯವಸ್ಥೆಗಳಿರುತ್ತವೆ ಎಂದರು.

ಶ್ರೀಮಂತವಾದ ನಾಡು, (5ನೇ ಪುಟಕ್ಕೆ)

# ರಾಜ ಮನೆತನಕ್ಕೆ ರಾಜ್ಯಪಾಲರ ಹುದ್ದೆ ನೀಡಲಿ

## ತರಳಬಾಳು ಹುಣ್ಣಿಮೆ ಸಮಾರೋಪ ಸಮಾರಂಭದಲ್ಲಿ ತರಳಬಾಳು ಜಗದ್ಗುರುಗಳು

ದಾವಣಗೆರೆ, ಫೆ. 12- ಅರಸೊತ್ತಿಗೆ ತೊರೆದು ರಾಜ್ಯವನ್ನು ಪ್ರಜಾಪ್ರಭುತ್ವಕ್ಕೆ ಒಪ್ಪಿಸಿದ ಮಹಾರಾಜರನ್ನು ರಾಜ್ಯಪಾಲರನ್ನಾಗಿ ಮಾಡಬೇಕು. ರಾಜರು ಹೆಚ್ಚು ಇದ್ದರೆ ಸರದಿ ಪ್ರಕಾರ ನೀಡಬೇಕಿತ್ತು. ಮೈಸೂರು ಮಹಾರಾಜರ ಮನೆತನದ ಮೇಲಿನ ಕೇಸುಗಳನ್ನು ಸರ್ಕಾರ ವಾಪಾಸ್ ಪಡೆಯಬೇಕು. ಇದಕ್ಕಾಗಿ ರಾಜ್ಯದ ಜನತೆ ಒಕ್ಕೊರಲಿನ ಆಗ್ರಹ ಮಾಡಬೇಕಾಗಿದೆ ಎಂದು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಅಭಿಪ್ರಾಯಪಟ್ಟರು.

ಭರಮಸಾಗರದಲ್ಲಿ ನಡೆಯುತ್ತಿರುವ ತರಳಬಾಳು ಹುಣ್ಣಿಮೆ ಮಹೋತ್ಸವದ ಒಂಭತ್ತನೇ ದಿನದ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ, ಶ್ರೀಗಳು ಮಾತನಾಡಿದರು.

ಕೇವಲ ಕೇಸ್ ವಾಪಾಸ್ ಪಡೆಯುವುದಷ್ಟೇ ಅಲ್ಲ. ರಾಜಮನೆತನವನ್ನು ಗೌರವಿಸುವ ಕೆಲಸ ಆಗಬೇಕಾಗಿದೆ. ಸಂಪುಟ ಸಭೆಯಲ್ಲಿ ತೀರ್ಮಾನ ಮಾಡಿ ಕೇಸ್ ಗಳನ್ನು ವಾಪಾಸ್ ಪಡೆಯುವ ಅಧಿಕಾರವಿದೆ. ಹಲವು ಕೇಸ್‌ಗಳನ್ನು ವಾಪಾಸ್ ಪಡೆಯಲಾಗಿದೆ ಎಂದು ಹೇಳಿದರು. ಪ್ರಜಾಪ್ರಭುತ್ವ ವ್ಯವಸ್ಥೆ ಕರ್ನಾಟಕದಲ್ಲಿ (5ನೇ ಪುಟಕ್ಕೆ)

### ಶಿಥಿಲಗೊಳ್ಳುತ್ತಿರುವ ಕೌಟುಂಬಿಕ ಜೀವನ

ಇಂದಿನ ಕೌಟುಂಬಿಕ ಜೀವನ ಶಿಥಿಲಗೊಳ್ಳುತ್ತಿದ್ದು, ಇದಕ್ಕೆ ಕಾರಣ ಹೃದಯ ಪ್ರೀತಿ ಮತ್ತು ಜ್ಞಾನದ ಕೊರತೆ. ಕೌಟುಂಬಿಕ ಮೊಬೈಲ್ ಸಂಪರ್ಕದಂತೆ ಇರಬೇಕು. ಬೇರೆ ಯಾವುದೇ ಕರೆಗಳನ್ನು ತಿರಸ್ಕರಿಸಿದರೂ ಸರಿ, ಆದರೆ, ಪತ್ನಿಯ, ತಂದೆ-ತಾಯಿ, ಸಹೋದರರ, ಸಹೋದರಿಯರ ಕರೆಗಳನ್ನು ಮಾತ್ರ ನಿಷೇಧಿಸದಿರಿ ಎಂದು ಕಿವಿಮಾತು ಹೇಳಿದರು. ಮಧ್ಯೆ ರಾತ್ರಿಯಾದರೂ ತಾಳ್ಮೆಯಿಂದ (5ನೇ ಪುಟಕ್ಕೆ)

### ಮುಂದಿನ ಹುಣ್ಣಿಮೆ ಭದ್ರಾವತಿಯಲ್ಲಿ

2026 ರ ತರಳಬಾಳು ಹುಣ್ಣಿಮೆ ಮಹೋತ್ಸವವನ್ನು ಭದ್ರಾವತಿಯಲ್ಲಿ ಆಚರಿಸಲು ಶ್ರೀಮಠ ನಿರ್ಧರಿಸಿದೆ ಎಂದು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಘೋಷಿಸಿದರು. ದುಬೈ ಸೇರಿದಂತೆ ರಾಜ್ಯದ ವಿವಿಧ ಕಡೆಗಳಿಂದ ತರಳಬಾಳು ಹುಣ್ಣಿಮೆ ಮಹೋತ್ಸವ ಆಚರಣೆಗೆ ಅವಕಾಶ ಕೋರಿ ಅರ್ಜಿಗಳು ಬಂದಿದ್ದು, ಅತಿ ಹೆಚ್ಚು ಮತಗಳನ್ನು ಪರಿಗಣಿಸಿ ಮುಂದಿನ ಬಾರಿ ಭದ್ರಾವತಿಗೆ ಅವಕಾಶ ಕಲ್ಪಿಸಿಕೊಡಲಾಗಿದೆ ಎಂದರು.

# ಆರ್‌ಬಿಐಯಿಂದ 50 ರೂಪಾಯಿ ಹೊಸ ನೋಟು

ಮುಂಬೈ, ಫೆ. 12 - ರಿಸರ್ವ್ ಬ್ಯಾಂಕ್ ಬುಧವಾರ ಐವತ್ತು ರೂಪಾಯಿಗಳ ಮುಖಬೆಲೆಯ ಹೊಸ ನೋಟುಗಳನ್ನು ಪ್ರಕಟಿಸಿದೆ.

ಇದರಲ್ಲಿ ಗವರ್ನರ್ ಸಂಜಯ್ ಮಲ್ಹೋತ್ರ ಅವರ ಸಹಿ ಇದೆ. ಡಿಸೆಂಬರ್ 2024ರಲ್ಲಿ ಮಲ್ಹೋತ್ರ ಗವರ್ನರ್ ಆಗಿ ಅಧಿಕಾರ ವಹಿಸಿ ಕೊಂಡಿದ್ದರು. ಹೊಸ 50 ರೂಗಳ ನೋಟು ಮಹಾತ್ಮ ಗಾಂಧಿ ಸರಣಿಯದ್ದಾಗಿದೆ ಎಂದು ರಿಸರ್ವ್ ಬ್ಯಾಂಕ್ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಜನವರಿಯಲ್ಲಿ ಹಣದುಬ್ಬರ ಶೇ. 4.3ಕ್ಕೆ ಇಳಿಕೆ

ನವದೆಹಲಿ, ಫೆ. 12 - ಜನವರಿ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ ಶೇಕಡ 4.31ಕ್ಕೆ ಇಳಿಕೆಯಾಗಿದೆ. ಇದು ಕಳೆದ 5 ತಿಂಗಳಲ್ಲೇ ಕಡಿಮೆ ಹಂತವಾಗಿದೆ. ಗ್ರಾಹಕರ ಬೆಲೆ ಸೂಚ್ಯಂಕ ಡಿಸೆಂಬರ್ ತಿಂಗಳಲ್ಲಿ 5.22 ಹಾಗೂ ಜನವರಿಯಲ್ಲಿ 5.1ರಷ್ಟಿತ್ತು. ಈ ಹಿಂದೆ ಆಗಸ್ಟ್ 2024ರಲ್ಲಿ ಹಣದುಬ್ಬರ ಶೇಕಡಾ 3.65 ರಷ್ಟಿತ್ತು. ಅಕ್ಟೋಬರ್ ತಿಂಗಳ ನಂತರ ಹಣದುಬ್ಬರ ಇಳಿಕೆಯಾಗುತ್ತಿದೆ.

# ವಿಜೃಂಭಣೆಯ ಹರಿಹರೇಶ್ವರ ರಥೋತ್ಸವ




ಹರಿಹರ, ಫೆ.12- ನಗರದ ಇತಿಹಾಸ ಪ್ರಸಿದ್ಧ ಶ್ರೀ ಹರಿಹರೇಶ್ವರ ಸ್ವಾಮಿಯ ರಥೋತ್ಸವ ಇಂದು ವಿಜೃಂಭಣೆಯಿಂದ ಜರುಗಿತು.

ಶ್ರೀ ಹರಿಹರೇಶ್ವರ ಸ್ವಾಮಿಗೆ ಮತ್ತು ಲಕ್ಷ್ಮೀ ದೇವಿಗೆ ನಾರಾಯಣ ಜೋಯಿಸರು, ಶ್ರೀನಿವಾಸ್ ಮೂರ್ತಿ, ಗುರುಪ್ರಸಾದ್ ಇವರ ನೇತೃತ್ವದಲ್ಲಿ ರುದ್ರಾಭಿಷೇಕ, ಅಲಂಕಾರ, ಮಹಾ ಮಂಗಳಾರತಿ ಸೇರಿದಂತೆ ವಿವಿಧ ಪೂಜಾ ಕಾರ್ಯಗಳು ನಡೆದವು. ನಂತರ 10 ಗಂಟೆಗೆ ಸ್ವಾಮಿಯನ್ನು ಪಲ್ಲಕ್ಕಿಯಲ್ಲಿರಿಸಿ ರಥೋತ್ಸವದ ಸ್ಥಳಕ್ಕೆ ಕೊಂಡೊಯ್ಯಲಾಯಿತು.

ಕಸಬಾ ಗೌಡ್ರು ಲಿಂಗರಾಜ್ ಪಾಟೀಲ್, ಮಾಜೇನಹಳ್ಳಿ ಚೆನ್ನಬಸಪ್ಪ ಗೌಡ್ರು, ಸಾಧು ವೀರಶೈವ ಸಮಾಜದ ಅಧ್ಯಕ್ಷ ಮಹದೇವಪ್ಪ ಗೌಡ್ರು, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಬಿಜೆಪಿ ನಗರ ಘಟಕದ ಅಧ್ಯಕ್ಷ ಅಜಿತ್ ಸಾವಂತ್, ದಿನೇಶ್ ಕೊಣ್ಣೂರ, ಮುಜರಾಯಿ ಇಲಾಖೆ ಆನಂದ್ ಇತರರು ರಥೋತ್ಸವದ ಗಾಲಿಗೆ ತೆಂಗಿನಕಾಯಿ ಒಡೆಯುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು.

ರಥೋತ್ಸವದಲ್ಲಿ ಡೊಳ್ಳು, ಡ್ರಮ್ ಸೆಟ್, ಬ್ಯಾಂಡ್ ಸೆಟ್, ಸಮಾಳ ಸೇರಿದಂತೆ ವಿವಿಧ ಕಲಾ ಮೇಳಗಳು ಮೆರಗನ್ನು ನೀಡಿದವು. ರಥೋತ್ಸವಕ್ಕೆ ಭಕ್ತರು, ಬಾಳೆಹಣ್ಣು, ಕಲ್ಲುಸಕ್ಕರೆ, ಬಾದಾಮಿ, ಉತ್ತುತ್ತಿ, ಎಸೆಯುವ ಮೂಲಕ ಭಕ್ತಿ ಸಮರ್ಪಿಸಿದರು. ರಥೋತ್ಸವವು ತೇರುಗಡ್ಡೆಯಿಂದ ಆರಂಭಗೊಂಡು ರಾಣಿ ಚೆನ್ನಮ್ಮ ವೃತ್ತದ ವರೆಗೆ ಸಾಗಿ ಪುನಃ ತೇರುಗಡ್ಡೆಯ ಸ್ಥಳಕ್ಕೆ ಬಂದು ತಲುಪಿತು.

ಬಿರ್ಲಾ ಕಲ್ಯಾಣ ಮಂಟಪದ ಆವರಣದಲ್ಲಿ ಗಜಾನನ ಯುವಕ ಸಂಘದ ಅದ್ವೈತ ಶಾಸ್ತ್ರೀ, ರಾಘು ದೀಕ್ಷಿತ್ ಮತ್ತು ಶರತ್ ಕೊಣ್ಣೂರ, ಕಿರಣ್ ಕುಮಾರ್ ಕುಟುಂಬದವರು, ನಂದಿಗಾವಿ ಶ್ರೀನಿವಾಸ್ ಅಭಿಮಾನಿ ಬಳಗದವರು, ನಡವಲಪೇಟೆ ಯುವಕ ಸಂಘದ ಮೋಹನ್ ದುರುಗೋಜಿ, ಮಹೇಂದ್ರಕರ್ ಜಗದೀಶ್ ಇತರರು ರಥೋತ್ಸವಕ್ಕೆ ಆಗಮಿಸಿದ್ದ ಸಹಸ್ರಾರು ಭಕ್ತರಿಗೆ ಬಿಸಿಬೇಳೆ ಬಾತ್, ಮೊಸರನ್ನ, ಕೊಸಂಬರಿ, ಮಜ್ಜಿಗೆ, ಪಾನಕವನ್ನು ವಿತರಿಸಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಹೆಚ್. ಎಸ್. ಶಿವಶಂಕರ್, ಎಸ್ ರಾಮಪ್ಪ, ಅರ್ಜುನ್ ಬಿ.ಪಿ ಹರೀಶ್, ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷ ವೀರೇಶ್ ಹನಗವಾಡಿ, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ನಗರಸಭೆ ಸದಸ್ಯರಾದ ಶಂಕರ್ ಖಟಾವ್ಕರ್, ಕೆ.ಜಿ. ಸಿದ್ದೇಶ್, ಮಾಜಿ ತಾಪಂ ಅಧ್ಯಕ್ಷ ಟಿ.ಜೆ. ಮುರುಗೇಶಪ್ಪ, ಬಿಜೆಪಿ ಗ್ರಾಮಾಂತರ ಘಟಕದ ಅಧ್ಯಕ್ಷ ಲಿಂಗರಾಜ್, ಚಿದಂಬರ ಜೋಯಿಸರು, ಹರಿಶಂಕರ್ ಜೋಯಿಸರು, ಲಕ್ಷ್ಮೀಕಾಂತ ಜೋಯಿಸರು, ವಾರಿಜಾ ವೆಂಕಟೇಶ್, ವಿ.ಎ. ಸಂಗೀತ ಜೋಶಿ ಮತ್ತಿತರರು ಹಾಜರಿದ್ದರು.

ಹರಿಹರ ವೃತ್ತ ನಿರೀಕ್ಷಕ ಎಸ್ ದೇವಾನಂದ್, ಪಿಎಸ್‌ಐಗಳಾದ ವಿಜಯಕುಮಾರ್, ಪ್ರಭು ಕೆಳಗಿನ ಮನೆ, ಶ್ರೀಪತಿ ಗಿನ್ನಿ ಮತ್ತು ಸಿಬ್ಬಂದಿ ವರ್ಗದವರು ಬಂದೋಬಸ್ತ್ ಏರ್ಪಡಿಸಿದ್ದರು.

# ಮೈಕ್ರೋ ಫೈನಾನ್ಸ್ ಸುಗ್ರೀವಾಜ್ಞೆಗೆ ರಾಜ್ಯಪಾಲರ ಒಪ್ಪಿಗೆ



ಬೆಂಗಳೂರು, ಫೆ. 12 - ಮೈಕ್ರೋ ಫೈನಾನ್ಸ್ ಕಂಪನಿಗಳ ಪೀಡನೆ ತಡೆಯುವ ಸುಗ್ರೀವಾಜ್ಞೆಗೆ ರಾಜ್ಯಪಾಲ ತಾವರ್‌ಚಂದ್ ಗೆಹ್ಲೋಟ್ ಒಪ್ಪಿಗೆ ನೀಡಿದ್ದಾರೆ.

ಮೈಕ್ರೋ ಫೈನಾನ್ಸ್ ಕಂಪ ನಿಗಳ ಪೀಡನೆಯಿಂದ ಹಲವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಹಾಗೂ ಹಲವರು ಮನೆಗಳನ್ನು ತೊರೆದಿದ್ದಾರೆ ಮತ್ತು ಸಾಲ ವಸೂಲಿ ಏಜೆಂಟರು ಸಾಲ ಪಡೆದವರಿಗೆ ಪೀಡಿಸುತ್ತಿದ್ದಾರೆ ಎಂಬ ವರದಿಗಳು ಬಂದಿದ್ದವು.

ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಮೈಕ್ರೋ ಫೈನಾನ್ಸ್ ಕಂಪನಿಗಳ ಪೀಡನೆ ತಡೆಯಲು ಸುಗ್ರೀವಾಜ್ಞೆಯನ್ನು ಹೊರಡಿಸಿತ್ತು.

ಕಳೆದ ಫೆಬ್ರವರಿ 8ರಂದು ಸುಗ್ರೀವಾಜ್ಞೆಯನ್ನು ವಾಪಸ್ ಕಳಿಸಿದ್ದ ರಾಜ್ಯಪಾಲರು, ಸಾಲ ನೀಡುವವರೂ ಸಹ ಸಮಾಜದ ಭಾಗವಾಗಿದ್ದಾರೆ. ಈ ಸುಗ್ರೀವಾಜ್ಞೆಯಿಂದ ಅವರಿಗೆ ಅನ್ಯಾಯವಾಗುತ್ತಿದೆ ಎಂದು ಹೇಳಿದ್ದರು. ಸುಗ್ರೀವಾಜ್ಞೆ ಮರಳಿಸುತ್ತಿರುವ ಕುರಿತ ಕಾರಣಗಳು ಹಾಗೂ ಸಲಹೆಗಳನ್ನು ನೀಡಿದ್ದರು. ರಾಜ್ಯಪಾಲರ ಕಳವಳಗಳನ್ನು ಪರಿಗಣಿಸಿದ್ದ ರಾಜ್ಯ ಸರ್ಕಾರ ಫೆಬ್ರುವರಿ ಹತ್ತರಂದು ಸುಗ್ರೀವಾಜ್ಞೆಯನ್ನು ಮರಳಿಸಿತ್ತು. ಬುಧವಾರ (5ನೇ ಪುಟಕ್ಕೆ)

# ಮುಡಾ ನಿವೇಶನ ಹಂಚಿಕೆ ಹಗರಣ ಲೋಪಕ್ಕೆ ಅಧಿಕಾರಿಗಳೇ ಕಾರಣ

**ಸಿಎಂ ಸಿದ್ದರಾಮಯ್ಯ ಕುಟುಂಬದ ಪಾತ್ರ ಇಲ್ಲ; ಲೋಕಾಯುಕ್ತ ತನಿಖಾ ವರದಿಯಲ್ಲಿ ಸ್ಪಷ್ಟ**

ಬೆಂಗಳೂರು, ಫೆ.12- ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ 14 ಬಿಡಿ ನಿವೇಶನಗಳ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕುಟುಂಬದ ಪಾತ್ರ ಇಲ್ಲ ಎಂದಿರುವ ಲೋಕಾಯುಕ್ತ, ಈ ಲೋಪಕ್ಕೆ ಅಧಿಕಾರಿಗಳೇ ಕಾರಣ ಎಂದಿದೆ.

ನ್ಯಾಯಾಲಯದ ಆದೇಶದಂತೆ ಪ್ರಕರಣದ ಬಗ್ಗೆ ತನಿಖೆ ನಡೆಸಿದ ಮೈಸೂರು ಲೋಕಾಯುಕ್ತ ಎಸ್‌ಪಿ ಉದೇಶ್, ತನಿಖೆ ಪೂರ್ಣಗೊಳಿಸಿ ಇಂದು ದಾಖಲೆಗಳ ಸಮೇತ ಬೃಹತ್ ವರದಿಯನ್ನು ಕೇಂದ್ರ ಕಚೇರಿಗೆ ತಲುಪಿಸಿದ್ದಾರೆ. ಮುಡಾ ಹಗರಣದ ತನಿಖೆ ಇಂದು ಇಡೀ ದಿನ ಕೇಂದ್ರ ಕಚೇರಿಯಲ್ಲಿ ಸಂಚಲನ ಮೂಡಿಸಿತು.

ಉದೇಶ್ ಅವರು ಇಂದು ಬೆಳಗ್ಗೆ ಕೇಂದ್ರ ಕಚೇರಿಯ ಪರಿಶೀಲನಾ ಅಧಿಕಾರಿಗೆ ತಲುಪಿಸಿದರು.

ಮೈಸೂರು ಎಸ್‌ಪಿ ನೀಡಿದ (5ನೇ ಪುಟಕ್ಕೆ)

# ನಾವು ಪರಾವಲಂಬಿ ವರ್ಗವನ್ನು ಸೃಷ್ಟಿಸುತ್ತಿಲ್ಲವೇ?

## ಚುನಾವಣೆಗೆ ಮುಂಚೆ ನೀಡುವ ಉಚಿತ ಕೊಡುಗೆಗಳಿಗೆ ಸುಪ್ರೀಂ ತರಾಟೆ

ನವದೆಹಲಿ, ಫೆ. 12 - ರಾಜಕೀಯ ಪಕ್ಷಗಳು ಚುನಾವಣೆಗೆ ಮುಂಚೆ ಉಚಿತ ಕೊಡುಗೆಗಳ ಭರವಸೆ ನೀಡುವುದನ್ನು ತರಾಟೆಗೆ ತೆಗೆದುಕೊಂಡಿರುವ ಸುಪ್ರೀಂ ಕೋರ್ಟ್, ನಾವು ಜನರನ್ನು ಮುಖ್ಯವಾಹಿನಿಗೆ ಅಭಿವೃದ್ಧಿಗಾಗಿ ತರುವ ಬದಲು ಪರಾವಲಂಬಿ ವರ್ಗವನ್ನು ಸೃಷ್ಟಿಸುತ್ತಿಲ್ಲವೇ? ಎಂದು ಪ್ರಶ್ನಿಸಿದೆ.

ನ್ಯಾಯಮೂರ್ತಿ ಬಿ.ಆರ್. ಗವಾಯಿ ಹಾಗೂ ಆಗಸ್ಟಿನ್ ಜಾರ್ಜ್ ಮಸೀಹ್ ಅವರನ್ನು ಒಳಗೊಂಡ ಪೀಠ ಈ ಪ್ರಶ್ನೆ ಮುಂದಿಟ್ಟಿದೆ.

ಜನರನ್ನು ಮುಖ್ಯ ವಾಹಿನಿಗೆ ತರುವುದು ಹಾಗೂ ಅವರು ದೇಶದ ಅಭಿವೃದ್ಧಿಗೆ ಕೊಡುಗೆ ಕೊಡುವಂತೆ ಮಾಡುವುದು ಉತ್ತಮ. ಆದರೆ ಹೀಗೆ ಮಾಡುವ ಬದಲು ನಾವು ಪರಾವಲಂಬಿ ವರ್ಗವನ್ನು ಸೃಷ್ಟಿಸುತ್ತಿಲ್ಲವೇ? ಎಂದು ಪೀಠ ಪ್ರಶ್ನಿಸಿದೆ.

ಚುನಾವಣೆಗೆ ಮುಂಚೆ ಘೋಷಿಸಲಾಗುವ ಲಡ್ಕಿ ಬಹನ್ ಮತ್ತು ಇತರ ಯೋಜನೆಗಳ ಕಾರಣದಿಂದ ಜನರು ಕೆಲಸ ಮಾಡಲು ಬಯಸುತ್ತಿಲ್ಲ ಎಂದು ನ್ಯಾಯಮೂರ್ತಿ ಗವಾಯಿ ಹೇಳಿದ್ದಾರೆ.

ನಗರ ಪ್ರದೇಶಗಳಲ್ಲಿರುವ ವಸತಿರಹಿತರಿಗೆ ಆಶ್ರಯದ ಹಕ್ಕು ನೀಡಬೇಕು ಎಂಬ ಅರ್ಜಿಯ ವಿಚಾರಣೆ ನಡೆಸುವಾಗ ಪೀಠ ಈ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದೆ.

ವಸತಿರಹಿತರ ಕುರಿತ ಕಳವಳವನ್ನು ನಾವು ಮೆಚ್ಚುತ್ತೇವೆ. ಆದರೆ ಅವರನ್ನು ಸಮಾಜದ ಮುಖ್ಯ ವಾಹಿನಿಗೆ ತರುವುದು ಹಾಗೂ ಅವರು ದೇಶದ ಅಭಿವೃದ್ಧಿಗೆ ಕೊಡುಗೆ ನೀಡುವಂತೆ ಮಾಡುವುದು ಉತ್ತಮವಲ್ಲವೇ? ಎಂದು ಪೀಠ ಪ್ರಶ್ನೆದೆ ಪ್ರಶ್ನಿಸಿದೆ.

ಅರ್ಜಿದಾರರ ಪರವಾಗಿ ಹಾಜರಿದ್ದ ವಕೀಲ ಪ್ರಶಾಂತ್ ಭೂಷಣ್, ಕೆಲಸ ದೊರೆತಿದ್ದರೆ ಕೆಲಸ (5ನೇ ಪುಟಕ್ಕೆ)

# ಕೇಂದ್ರ ಸರ್ಕಾರದಿಂದ ಕರ್ನಾಟಕದ ಮೇಲೆ '3ಡಿ' ನೀತಿ

## ಬಜೆಟ್ ಮೇಲಿನ ಚರ್ಚೆಯಲ್ಲಿ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ತರಾಟೆ



ನವದೆಹಲಿ, ಫೆ.12- ಕೇಂದ್ರಕ್ಕೆ ಅತ್ಯಧಿಕ ಪ್ರಮಾಣದಲ್ಲಿ ತೆರಿಗೆ ನೀಡುವ ರಾಜ್ಯಗಳಲ್ಲೊಂದಾದ ಕರ್ನಾಟಕಕ್ಕೆ ಕೇಂದ್ರ ಬಜೆಟ್‌ನಲ್ಲಿ ದೊರೆತಿದ್ದು ಮಾತ್ರ ಅತ್ಯಲ್ಪ. ಕೇಂದ್ರ ಸರ್ಕಾರ ಕರ್ನಾಟಕದ ಮೇಲೆ '3D' ನೀತಿ ಅಂದರೆ Discriminate (ತಾರತಮ್ಯ), Delay (ವಿಳಂಬ), Deny (ನಿರಾಕರಿಸು) ತೋರಿಸಿದೆ ಎಂದು ಲೋಕಸಭಾ ಸದಸ್ಯರಾದ ಡಾ.ಪ್ರಭಾ ಮಲ್ಲಿಕಾರ್ಜುನ್ ಕೇಂದ್ರ ಬಜೆಟ್‌ನಲ್ಲಿ ರಾಜ್ಯಕ್ಕೆ ಆದ ಅನ್ಯಾಯದ ಬಗ್ಗೆ ನವದೆಹಲಿಯ ಸಂಸತ್‌ನ ಬಜೆಟ್ ಅಧಿವೇಶನದ ಚರ್ಚೆಯ ವೇಳೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕೇಂದ್ರ ಸರ್ಕಾರ 'ಸಬ್ ಕಾ ಸಾಥ್ ಸಬ್ ಕಾ ವಿಕಾಸ್' ಎಂಬ ಭರವಸೆ ನೀಡಿದರೂ, ವಾಸ್ತವದಲ್ಲಿ ಇದು ಕೆಲವರ ಜೊತೆ ಕೆಲವರ ಸಾಥ್ ಅಭಿವೃದ್ಧಿ ಎನ್ನುವಂತಾಗಿದೆ. ಕೇಂದ್ರ ವಿತ್ತ ಸಚಿವರು 'ಮಧ್ಯಮವರ್ಗದ ಧ್ವನಿಯನ್ನು ಕೇಳಿದ್ದೇನೆ' ಎಂದು ಹೇಳುತ್ತಾರೆ. ಆದರೆ 2023-24ನೇ ಹಣಕಾಸು ವರ್ಷದಲ್ಲಿ ಕೇವಲ ಶೇ.6.68 ಜನರು ಮಾತ್ರ ಆದಾಯ ತೆರಿಗೆ ಸಲ್ಲಿಸಿದ್ದಾರೆ. ಭಾರತದ ಜನಸಂಖ್ಯೆ 142 ಕೋಟಿ. ಹೀಗಿದ್ದಾಗ ಹಣಕಾಸು ಸಚಿವರು ಯಾವ ಮಧ್ಯಮ ವರ್ಗದ ಬಗ್ಗೆ ಮಾತನಾಡುತ್ತಿದ್ದಾರೆ? ದಿನಕ್ಕೆ ಶೇ 100ಕ್ಕೂ ಕಡಿಮೆ ಆದಾಯವಿರುವ ಬಡವರಿಗೆ ಏನಾದರೂ ಪರಿಹಾರವಿದೆಯಾ ಎಂದು ಸಂಸದರು ಪ್ರಶ್ನಿಸಿದ್ದಾರೆ.

ಪದವೀಧರ ನಿರುದ್ಯೋಗದ ಪ್ರಮಾಣ ಶೇ.29.1 ಇದೆ. ಇದು ಇತ್ತೀಚಿನ ಇತಿಹಾಸದಲ್ಲೇ ಅತಿ ಹೆಚ್ಚು. 2024ರ ಜೂನ್‌ನಲ್ಲಿ ನಿರುದ್ಯೋಗದ ಪ್ರಮಾಣ ಶೇ.9.2 ಏರಿಕೆಯಾಯಿತು. 2014 ರಿಂದ, ನೈಜ ವೇತನ (real wage growth) ಕುಸಿದಿದೆ. ಕೃಷಿ ಕಾರ್ಮಿಕರ ವೇತನ ಕೇವಲ ಶೇ.0.8 ಏರಿಕೆಯಾಗಿದೆ. ಅನೌಪಚಾರಿಕ ವಲಯದಲ್ಲಿ ಶೇ.0.2 ಮಾತ್ರ ಹಾಗೂ ಕಟ್ಟಡ ಕಾರ್ಮಿಕರಿಗೆ ಅತ್ಯಲ್ಪ ವೇತನವಿದೆ.

ಸರ್ಕಾರಿ ಬ್ಯಾಂಕುಗಳು ಶ್ರೀಮಂತರಿಗೆ ಕಳೆದ 5 ವರ್ಷಗಳಲ್ಲಿ ಶೇ.9.90 ಲಕ್ಷ ಕೋಟಿ ಸಾಲ ಮನ್ನಾ ಮಾಡಿವೆ ಇದು ವಿಕಸಿತ ಭಾರತವೇ? ಇನ್ನು ಗೃಹ ಸಾಲ ಮತ್ತು ನಿರ್ವಹಣಾ ಸಾಲಗಳ ಪ್ರಮಾಣ ಜಿಡಿಪಿ ನ ಶೇ.39 ತಲುಪಿದೆ, ಜನ ಸಾಮಾನ್ಯರು ಸಾಲದ (5ನೇ ಪುಟಕ್ಕೆ)

# ಮರು ನಿರ್ಮಾಣಗೊಂಡ ಕಚೇರಿಗೆ ಆರ್‌ಎಸ್‌ಎಸ್ ವಾಪಸ್

ನವದೆಹಲಿ, ಫೆ.12 - ಆರ್‌ಎಸ್‌ಎಸ್ ಮರು ನಿರ್ಮಾಣಗೊಂಡಿರುವ ತನ್ನ ಹಳೆಯ ವಿಳಾಸಕ್ಕೆ ಮರಳಿದೆ. ದೆಹಲಿಯ 3.75 ಎಕರೆ ಪ್ರದೇಶದಲ್ಲಿ 13 ಅಂತಸ್ತುಗಳ ಮೂರು ಸ್ಥಾವರಗಳನ್ನು ನಿರ್ಮಿಸಲಾಗಿದೆ. ಇವು ಒಟ್ಟು 300 ಕೋಣೆಗಳು ಹಾಗೂ ಕಚೇರಿಗಳನ್ನು ಹೊಂದಿವೆ.

ಆರ್‌ಎಸ್‌ಎಸ್ ಕಚೇರಿಯಾದ ಕೇಶವ ಕುಂಜ್ ಮರು ನಿರ್ಮಾಣಕ್ಕೆ 150 ಕೋಟಿ ರೂ. ವೆಚ್ಚವಾಗಿದೆ. 75 ಸಾವಿರಕ್ಕೂ ಹೆಚ್ಚು ಜನರು ಈ ಮರು ನಿರ್ಮಾಣಕ್ಕೆ ದೇಣಿಗೆ ನೀಡಿದ್ದಾರೆ. ಎಂಟು ವರ್ಷಗಳಲ್ಲಿ ಮರು ನಿರ್ಮಾಣ ಪೂರ್ಣಗೊಂಡಿದೆ. ಕೊರೊನಾ ಕಾರಣದಿಂದ ಮರು ನಿರ್ಮಾಣ ಕಾರ್ಯ ವಿಳಂಬವಾಗಿತ್ತು.

ಫೆಬ್ರುವರಿ 19ರಂದು ಕಚೇರಿಯ ಉದ್ಘಾಟನೆ ನಡೆಯಲಿದೆ. ಉದ್ಘಾಟನಾ ಸಮಾರಂಭದಲ್ಲಿ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹಾಗೂ ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಉಪಸ್ಥಿತರಿರಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

2016ರಲ್ಲಿ ಆರ್‌ಎಸ್‌ಎಸ್ ತನ್ನ ಕಚೇರಿಯ ಮರುನಿರ್ಮಾಣ ಆರಂಭಿಸಿತ್ತು. ಮೂಲ ಕಚೇರಿ 1962 ರಲ್ಲಿ ನಿರ್ಮಾಣವಾಗಿತ್ತು. ಈ ಹಿಂದೆ ಸಂಘವು ಎರಡು ಅಂತಸ್ತಿನ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿತ್ತು.



ಆಧುನಿಕ ತಂತ್ರಜ್ಞಾನ ಹಾಗೂ ಪಾರಂಪರಿಕ ವಾಸ್ತುಶಿಲ್ಪದೊಂದಿಗೆ ನಿರ್ಮಿಸಲಾಗಿರುವ 13 ಅಂತಸ್ತುಗಳ ಮೂರು ಸ್ಥಾವರಗಳು

ಆಧುನಿಕ ತಂತ್ರಜ್ಞಾನ ಹಾಗೂ ಪಾರಂಪರಿಕ ವಾಸ್ತುಶಿಲ್ಪದೊಂದಿಗೆ ಹೊಸ ಕಟ್ಟಡವನ್ನು ನಿರ್ಮಿಸಲಾಗಿದೆ. ಗುಜರಾತ್‌ನ ವಾಸ್ತುಶಿಲ್ಪಿ ಅನುಪ್ ದಾವೆ ಕಟ್ಟಡದ ವಿನ್ಯಾಸ ರೂಪಿಸಿದ್ದರು.

3 ಸ್ಥಾವರಗಳಿಗೆ ಸಾಧನ, ಪ್ರೇಮ ಹಾಗೂ ಅರ್ಚನ ಎಂಬ ಹೆಸರಿಡಲಾಗಿದೆ. ಒಂದು ಬೃಹತ್ ಆಡಿಟೋರಿಯಂಗೆ ವಿಶ್ವ ಹಿಂದೂ ಪರಿಷತ್ ನಾಯಕ ಅಶೋಕ್ ಸಿಂಘಾಲ್ ಅವರ ಹೆಸರಿಡಲಾಗಿದೆ. ಅವರು ರಾಮಮಂದಿರ ನಿರ್ಮಾಣ ಅಭಿಯಾನದಲ್ಲಿ ಪ್ರಮುಖವಾಗಿ ಗುರುತಿಸಿಕೊಂಡಿದ್ದರು.

ನಾಗಪುರದಲ್ಲಿ ಕೇಂದ್ರ ಕಚೇರಿ ಹೊಂದಿರುವ ಆರ್.ಎಸ್.ಎಸ್., ಬೆಂಗಳೂರಿನಲ್ಲಿ ಮಾರ್ಚ್ 21ರಿಂದ ಮೂರು ದಿನಗಳ ಕಾಲ ಅಖಿಲ ಭಾರತೀಯ ಪ್ರತಿನಿಧಿ ಸಭಾ ನಡೆಸಲಿದೆ ಎಂದು ಮೂಲಗಳು ತಿಳಿಸಿವೆ. ಇದು ಸಂಘದ ಅತ್ಯುನ್ನತ ನಿರ್ಧಾರ ತೆಗೆದುಕೊಳ್ಳುವ ಸಭೆಯಾಗಿದೆ.

# ಹೋಮಿಯೋಪತಿ ಆಯೋಗದ ಅಧ್ಯಕ್ಷರ ವಜಾಕ್ಕೆ ಸುಪ್ರೀಂ ಆದೇಶ

ನವದೆಹಲಿ, ಫೆ. 12 - ಹೋಮಿಯೋಪತಿ ರಾಷ್ಟ್ರೀಯ ಆಯೋಗದ ಅಧ್ಯಕ್ಷರನ್ನು ವಜಾಗೊಳಿಸಲು ಸುಪ್ರೀಂ ಕೋರ್ಟ್ ಆದೇಶಿಸಿದೆ.

ಅವರು ನಿವೃತ್ತಿಗೊಳ್ಳಲು ಕೆಲವೇ ತಿಂಗಳುಗಳಿರುವಂತೆ ಸುಪ್ರೀಂ ಕೋರ್ಟ್ ಈ ಆದೇಶ ಹೊರಡಿಸಿದೆ.

ಕರ್ನಾಟಕ ಹೈಕೋರ್ಟ್ ಆದೇಶವನ್ನು ತಳ್ಳಿ ಹಾಕಿರುವ ನ್ಯಾಯಮೂರ್ತಿಗಳಾದ ದೀಪಂಕರ್ ದತ್ತ ಹಾಗೂ ಮನಮೋಹನ್ ಅವರನ್ನು ಒಳಗೊಂಡಿರುವ ಪೀಠ, ನೇಮಕಾತಿ ಪ್ರಕ್ರಿಯೆಯಲ್ಲಿ ನಿಯಮಗಳನ್ನು ಪಾಲಿಸಿಲ್ಲ ಎಂದು ಹೇಳಿದೆ. ಒಂದು ವಾರದಲ್ಲಿ ಹಾಲಿ ಅಧ್ಯಕ್ಷರು ತಮ್ಮ ಕೆಲಸಗಳನ್ನು ಪೂರ್ಣಗೊಳಿಸಿ ನಿರ್ಗಮಿಸಬೇಕು. ಆದರೆ ಹಣಕಾಸು ಹಾಗೂ ನೀತಿಗಳ ಕುರಿತು ಯಾವುದೇ ನಿರ್ಧಾರ ತೆಗೆದುಕೊಳ್ಳಬಾರದು ಎಂದು ಪೀಠ ತಿಳಿಸಿದೆ.

ಹೋಮಿಯೋಪತಿ ರಾಷ್ಟ್ರೀಯ ಆಯೋಗ ಕಾಯ್ದೆಯ ಪ್ರಕಾರ ಅಧ್ಯಕ್ಷರಾಗುವ ಅಭ್ಯರ್ಥಿ ಕನಿಷ್ಠ 20 ವರ್ಷಗಳ ಅನುಭವ ಹೊಂದಿರಬೇಕು ಹಾಗೂ ಅವರು ಹೋಮಿಯೋಪತಿ ವಲಯದ ನಾಯಕರಾಗಿರಬೇಕು. ಈ ಕಡ್ಡಾಯ ಅರ್ಹತೆಗಳನ್ನು ಕೈ ಬಿಡಲಾಗದು ಎಂದು ಪೀಠ ಹೇಳಿದೆ. ಆಯೋಗಕ್ಕೆ ನೂತನ ಅಧ್ಯಕ್ಷರನ್ನು ಆಯ್ಕೆ ಮಾಡಲು ಶೀಘ್ರವೇ ಪ್ರಕ್ರಿಯೆ ಆರಂಭಿಸಬೇಕು. ಆಯ್ಕೆ ಪ್ರಕ್ರಿಯೆ ತಾರ್ಕಿಕ ಅಂತ್ಯ ತಲುಪಲಿದೆ ಎಂದು ಸುಪ್ರೀಂಕೋರ್ಟ್ ಪೀಠ ಆಶಿಸಿದೆ.

ಹಾಲಿ ಅಧ್ಯಕ್ಷರಾಗಿರುವ ಡಾ. ಅನಿಲ್ ಖುರಾನ ಅವರು ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಕ್ಕೆ ಸಂಬಂಧಿಸಿದಂತೆ ಮುಂದಿನ ದಿನಗಳಲ್ಲಿ ಯಾವುದೇ ಲಾಭಗಳನ್ನು ನೀಡಬಾರದು ಎಂದು ಪೀಠ ಹೇಳಿದೆ.

ಅನಿಲ್ ಖುರಾನ ಅವರನ್ನು ಹೋಮಿಯೋಪತಿ ಆಯೋಗದ ಅಧ್ಯಕ್ಷರಾಗಿ ನೇಮಿಸಿದ್ದನ್ನು ಪ್ರಶ್ನಿಸಿ ಡಾ. ಅಮರಗೌಡ ಎಲ್. ಪಾಟೀಲ್ ಅವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು. ಖುರಾನ ಅವರು ಜುಲೈ 4, 2025ರಲ್ಲಿ ಹೋಮಿಯೋಪತಿ ಆಯೋಗದ ಅಧ್ಯಕ್ಷ ಸ್ಥಾನದಿಂದ ನಿವೃತ್ತರಾಗಬೇಕಿತ್ತು.

# ಇಂದಿನಿಂದ 286ನೇ ಸಂತ ಸೇವಾಲಾಲ್ ಜಯಂತ್ಯುತ್ಸವ

ದಾವಣಗೆರೆ, ಫೆ.12- ನ್ಯಾಮತಿ ತಾಲ್ಲೂಕಿನ ಭಾಯಾಗಢ್‌ನಲ್ಲಿ ನಾಳೆ ದಿನಾಂಕ 13ರಿಂದ 15ರ ವರೆಗೆ 286ನೇ ಸಂತ ಸೇವಾಲಾಲ್ ಜಯಂತಿ ಕಾರ್ಯಕ್ರಮ ನಡೆಯಲಿದೆ ಎಂದು ಸಮಾಜದ ಮುಖಂಡ ರಾಘವೇಂದ್ರ ನಾಯ್ಕ್ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ಹಾಗೂ ಸಂತ ಸೇವಾಲಾಲ್ ಜನ್ಮಸ್ಥಾನ ಮಹಾಮಠ ಸಮಿತಿ ವತಿಯಿಂದ ಕಾರ್ಯಕ್ರಮ ಆಯೋಜನೆ ಮಾಡಲಾಗಿದೆ ಎಂದು ಹೇಳಿದರು.



ನಾಡಿದ್ದು ದಿನಾಂಕ 14ರ ಮಧ್ಯಾಹ್ನ 2ಕ್ಕೆ ಪ್ರಧಾನ ವೇದಿಕೆಯಲ್ಲಿ ನಡೆಯುವ ಜಯಂತಿ ಕಾರ್ಯಕ್ರಮವನ್ನು ಸಿಎಂ ಸಿದ್ದರಾಮಯ್ಯ ಉದ್ಘಾಟಿಸಲಿದ್ದು, ಕೇಂದ್ರ ಸಚಿವ ಹೆಚ್.ಡಿ. ಕುಮಾರ್ ಸ್ವಾಮಿ ಉಪಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಸಂತರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವರು.

**ನ್ಯಾಮತಿ ತಾಲ್ಲೂಕಿನ ಭಾಯಾಗಢ್‌ನಲ್ಲಿ ಇಂದು ಬೆಳಗ್ಗೆ 9ಕ್ಕೆ ಉಪ ಸಭಾಪತಿ ರುದ್ರಪ್ಪ ಲಮಾಣಿ ಅವರ ನೇತೃತ್ವದಲ್ಲಿ ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಯದೇವ ನಾಯ್ಕ್ ಅವರು ಧ್ವಜಾರೋಹಣ ನೆರವೇರಲಿದೆ ಎಂದು ಹೇಳಿದರು.**

**ಇಂದು ಬೆಳಗ್ಗೆ 10 ಗಂಟೆಗೆ ಹಾತಿರಾಂ ಸಭಾಂಗಣದಲ್ಲಿ ಕವಿಗೋಷ್ಠಿ ನಡೆಯಲಿದ್ದು, ಚಂದ್ರಶೇಖರ್ ರಾಮಾನಾಯ್ಕ್ ಅಧ್ಯಕ್ಷತೆ ವಹಿಸುವರು. ಎಂ. ಮಹಾದೇವ ನಾಯ್ಕ್, ಶ್ರೀನಿವಾಸ್ ನಾಯ್ಕ್, ಬಾಸು ಪಿ. ಚೌವ್ಹಾಣ್ ಸೇರಿದಂತೆ ಗಣ್ಯರು ಗೋಷ್ಠಿಯಲ್ಲಿ ಪಾಲ್ಗೊಳ್ಳುವರು ಎಂದರು.**

**ಸಂಜೆ 4.30ಕ್ಕೆ ರಾಜ್ಯ ಮಟ್ಟದ ವಿಚಾರ ಸಂಕಿರಣ ನಡೆಯಲಿದ್ದು, ಡಾ. ಎ.ಆರ್. ಗೋವಿಂದಸ್ವಾಮಿ ಉದ್ಘಾಟಿಲಿದ್ದಾರೆ.**

**ರಾತ್ರಿ ವೇಳೆ ರಾಜ್ಯದ ವಿವಿಧ ಭಾಗದ ಕಲಾತಂಡಗಳಿಂದ ರಾತ್ರಿ ಸಾಂಸ್ಕೃತಿಕ ಸಭೆ ನಡೆಯಲಿದೆ.**

ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಹಾತಿರಾಂ ಬಾವಾಜಿ ಸಭಾಂಗಣ ಉದ್ಘಾಟಿಸಿದರೆ, ವಿಹಾರ ವನವನ್ನು ಹೆಚ್.ಕೆ. ಪಾಟೀಲ್, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಕಟ್ಟಡವನ್ನು ಡಾ. ಪ್ರಕಾಶ್ ರುದ್ರಪ್ಪ ಪಾಟೀಲ್ ಮತ್ತು ಸೇವಾಲಾಲ್ ಸರೋವರವನ್ನು ಸಂಜಯ್ ಡಿ. ರಾಥೋಡ್ ಉದ್ಘಾಟಿಸಲಿದ್ದಾರೆ.

ಡಾ.ಹೆಚ್.ಸಿ ಮಹಾದೇವಪ್ಪ ವಲಸೆ ಮಕ್ಕಳ ವಸತಿ ಶಾಲೆಯ ಶಂಕು ಸ್ಥಾಪನೆ ಮಾಡಲಿದ್ದು, ಸಚಿವರಾದ ಸತೀಶ್ ಜಾರಕಿಹೊಳಿ, ಮಧು ಬಂಗಾರಪ್ಪ, ಮಾಜಿ ಸಿಎಂ ಯಡಿಯೂರಪ್ಪ, ಛಲವಾದಿ ನಾರಾಯಣಸ್ವಾಮಿ, ವಿಪಕ್ಷ ನಾಯಕ ಆರ್. ಅಶೋಕ್ ಸ್ಥಳೀಯ ಶಾಸಕ ಡಿ.ಜಿ. ಶಾಂತನಗೌಡ ಸೇರಿದಂತೆ ಗಣ್ಯರು ಭಾಗವಹಿಸುವರು.

ಸಂಜೆ 5.30ಕ್ಕೆ ಮಹಾ ವೇದಿಕೆಯಲ್ಲಿ 'ಸಂಘ, ಸಂಸ್ಥೆ ಮತ್ತು ಧಾರ್ಮಿಕ ಮುಖಂಡರ ಸಮಾವೇಶ' ನಡೆಯಲಿದ್ದು, ಸೇನಾಭಗತ್ ಮಹಾರಾಜ್, ಸಿದ್ದಲಿಂಗ ಸ್ವಾಮೀಜಿ, ಸರ್ದಾರ್ ಸೇವಾಲಾಲ್ ಸ್ವಾಮೀಜಿ ಮತ್ತು ಜಗನು ಮಹಾರಾಜ್ ಸೇರಿದಂತೆ ಇನ್ನಿತರ ಧಾರ್ಮಿಕ ಗುರುಗಳು ಭಾಗವಹಿಸಲಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಸಮಾವೇಶ ಉದ್ಘಾಟಿಸಲಿದ್ದು, ಉಪ ಸಭಾಪತಿ ರುದ್ರಪ್ಪ ಮಾನಪ್ಪ ಲಮಾಣಿ ಅಧ್ಯಕ್ಷತೆ ವಹಿಸಲಿದ್ದಾರೆ. ಇದೇ ವೇಳೆ 'ಬಂಜಾರ ಅಧ್ಯಾತ್ಮಿಕ, ಸಂಸ್ಕೃತಿ ಮತ್ತು ಇತಿಹಾಸ' ಕೃತಿ ಬಿಡುಗಡೆ ಮಾಡಲಾಗುವುದು.

ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಯದೇವ ನಾಯ್ಕ್ ಮಾತನಾಡಿ, ನಿಗಮದ ವತಿಯಿಂದ ವಿದ್ಯುತ್ ಅಲಂಕಾರ, ಭಕ್ತರಿಗೆ ಊಟ-ಉಪಹಾರ, 40 ಸಾವಿರ ಮಜ್ಜಿಗೆ ಪ್ಯಾಕೆಟ್ ವಿತರಣೆ ಹಾಗೂ ಕುಡಿಯುವ ನೀರು ಹಾಗೂ ಶೌಚಾಲಯ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು. ಬಿಜಾಪುರದಿಂದ 3 ಬಸ್ಸುಗಳು ಹಾಗೂ ರಾಯಚೂರಿನಿಂದ 2 ಬಸ್ಸುಗಳನ್ನು ಮಾಡಿದ್ದು, ಲಂಬಾಣಿ ಉಡುಗೆಯಲ್ಲಿ ಮಹಿಳೆಯರು ಉತ್ಸವದಲ್ಲಿ ಭಾಗವಹಿಸಲಿದ್ದಾರೆ.

ಈ ವೇಳೆ ಸಮಾಜದ ಮುಖಂಡ ಹನುಮಂತ ನಾಯ್ಕ್, ಮಂಜಾನಾಯ್ಕ್, ಪ್ರಕಾಶ್ ನಾಯ್ಕ್, ಡಾ. ಉತ್ತಮ ಇತರರು ಇದ್ದರು.

# ಎರಡು ಕೋಟಿಗೂ ಹೆಚ್ಚು ಭಕ್ತರಿಂದ ಮಾಘ ಪೂರ್ಣಿಮೆಯ ಪವಿತ್ರ ಸ್ನಾನ

ಪ್ರಯಾಗ್‌ರಾಜ್, ಫೆ. 12 - ಬಿಗಿ ಭದ್ರತಾ ಕ್ರಮಗಳ ನಡುವೆ ಎರಡು ಕೋಟಿಗೂ ಹೆಚ್ಚು ಭಕ್ತರು ಮಹಾಕುಂಭ ಮೇಳ ನಡೆಯುತ್ತಿರುವ ಸಂಗಮದಲ್ಲಿ ಮಾಘ ಪೂರ್ಣಿಮೆಯ ದಿನದಂದು ಪವಿತ್ರ ಸ್ನಾನ ಮಾಡಿದ್ದಾರೆ.

ಇಂದು ಬೆಳಿಗ್ಗೆಯಿಂದಲೇ ಆರಂಭವಾದ ಪವಿತ್ರ ಸ್ನಾನಕ್ಕೆ ವಿಶೇಷ ವ್ಯವಸ್ಥೆಗಳನ್ನು ಮಾಡಲಾಗಿತ್ತು ಎಂದು ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಬೆಳಿಗ್ಗೆ ನಾಲ್ಕು ಗಂಟೆಯಿಂದಲೇ ಲಕ್ನೌದ ತಮ್ಮ ಅಧಿಕೃತ ನಿವಾಸದಿಂದ ವ್ಯವಸ್ಥೆಗಳ ಮೇಲೆ ನಿಗಾ ವಹಿಸಿದ್ದರು ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಮಾಘ ಪೂರ್ಣಿಮೆಯ ದಿನದಂದು ಒಂದು ತಿಂಗಳಿಂದ ಭಕ್ತರು ನಡೆಸುತ್ತಿರುವ ಕಲ್ಪವಾಸ ಅಂತ್ಯವಾಗುತ್ತದೆ. 10 ಲಕ್ಷ ಕಲ್ಪವಾಸಿಗಳು ಮಹಾ ಕುಂಭದಲ್ಲಿ ನೆಲೆಸಿದ್ದರು. ಇಂದಿನಿಂದ ಅವರು ಮಹಾ ಕುಂಭ ಪ್ರದೇಶದಿಂದ ನಿರ್ಗಮಿಸಲಿದ್ದಾರೆ.

ಬೆಳಗ್ಗೆಯಿಂದಲೇ ಪವಿತ್ರ ಸ್ನಾನ ಆರಂಭವಾಗಿತ್ತು. ಸಂಜೆ ಆರು ಗಂಟೆ ವೇಳೆಗೆ ಎರಡು ಕೋಟಿ ಜನರು ತ್ರಿವೇಣಿ ಸಂಗಮ ಹಾಗೂ ಇತರ ಘಾಟ್‌ಗಳಲ್ಲಿ ಪವಿತ್ರ ಸ್ನಾನ ಮಾಡಿದ್ದಾರೆ ಎಂದು ಸರ್ಕಾರದ ಹೇಳಿಕೆಯಲ್ಲಿ ತಿಳಿಸಲಾಗಿದೆ.

# ಕಡ್ಲೇಬಾಳು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಅಧ್ಯಕ್ಷ - ಉಪಾಧ್ಯಕ್ಷರ ಆಯ್ಕೆ



ದಾವಣಗೆರೆ, ಫೆ. 12 - ಕಡ್ಲೇಬಾಳು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಕಡ್ಲೇಬಾಳಿನ ಹೆಚ್.ಎಸ್. ಉಜ್ಜಪ್ಪ ಮತ್ತು ಉಪಾಧ್ಯಕ್ಷರಾಗಿ ದೇವರಹಟ್ಟಿಯ ಎಂ. ಇಮ್ತಿಯಾಜ್ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ ಎಂದು ಚುನಾವಣಾಧಿಕಾರಿ ಸುರೇಶ್ ನಾಯಕ್ ಎಲ್. ತಿಳಿಸಿದ್ದಾರೆ.

# ಸರಳೀಕೃತ ಆದಾಯ ತೆರಿಗೆ ಮಸೂದೆಯಲ್ಲಿ 'ತೆರಿಗೆ ವರ್ಷ'ದ ಪರಿಕಲ್ಪನೆ

ನವದೆಹಲಿ, ಫೆ. 12 - ಕೇಂದ್ರ ಸರ್ಕಾರ ರೂಪಿಸಿರುವ ನೂತನ ಆದಾಯ ತೆರಿಗೆ ಮಸೂದೆಯಲ್ಲಿ 'ತೆರಿಗೆ ವರ್ಷ' ಎಂಬ ಪರಿಕಲ್ಪನೆ ಜಾರಿಗೆ ತರಲಾಗುತ್ತಿದೆ.

ಇದರೊಂದಿಗೆ ಅಸೆಸ್‌ಮೆಂಟ್ ವರ್ಷ ಹಾಗೂ ಹಿಂದಿನ ವರ್ಷ ಎಂಬ ಪದಗಳನ್ನು ಕೈ ಬಿಡಲಾಗಿದೆ.

ಆದಾಯ ತೆರಿಗೆ ಮಸೂದೆ 2025 ಅನ್ನು ಗುರುವಾರ ಸಂಸತ್ತಿಗೆ ಪರಿಚಯಿಸಲಾಗುವುದು.

ಆರು ದಶಕಗಳ ಹಳೆಯ ಆದಾಯ ತೆರಿಗೆ ಕಾಯ್ದೆ ಜಾಗದಲ್ಲಿ ಹೊಸ ಮಸೂದೆ ಜಾರಿಗೆ ತರಲಾಗುತ್ತಿದೆ.

ಏಪ್ರಿಲ್ ಒಂದರಿಂದ 12 ತಿಂಗಳ ಅವಧಿಯನ್ನು ತೆರಿಗೆ ವರ್ಷ ಎಂದು ಪರಿಗಣಿಸಲಾಗುತ್ತದೆ. ಈ ಹಿಂದಿನ ಅಸೆಸ್‌ಮೆಂಟ್ ವರ್ಷ ಹಾಗೂ ಹಿಂದಿನ ವರ್ಷ ಎಂಬ ಪರಿಕಲ್ಪನೆಗಳನ್ನು ಕೈ ಬಿಡಲಾಗುವುದು. ಈಗಿರುವ ಪದ್ಧತಿಯಲ್ಲಿ ಏಪ್ರಿಲ್ 2024 ರಿಂದ ಮಾರ್ಚ್ 2025 ರ ಆದಾಯವನ್ನು ಹಿಂದಿನ ವರ್ಷ ಎಂದು ಪರಿಗಣಿಸಲಾಗುತ್ತದೆ. ಈ ಆದಾಯವನ್ನು 2025 - 26ರ ಅಸೆಸ್‌ಮೆಂಟ್ ವರ್ಷದಲ್ಲಿ ಪರಿಗಣಿಸಲಾಗುತ್ತದೆ.

ಹೊಸ ಮಸೂದೆಯು ಸಂಸತ್ತಿನ ಸ್ಥಾಯಿ ಸಮಿತಿಯ ಪರಿಶೀಲನೆಗೆ ಒಳಪಡಲಿದೆ. ನಂತರ ಸಂಸತ್ತಿನ ಅಂಗೀಕಾರ ಪಡೆಯಲಿದೆ. ಅನಂತರ ಏಪ್ರಿಲ್ 1, 2026 ರಿಂದ ಜಾರಿಗೆ ಬರುವ ಸಾಧ್ಯತೆ ಇದೆ. ಹೊಸ ಆದಾಯ ತೆರಿಗೆ ಮಸೂದೆಯನ್ನು ಸರಳ ಭಾಷೆಯಲ್ಲಿ ಹಾಗೂ ಸಂಕ್ಷಿಪ್ತ ಪದಗಳಲ್ಲಿ ರೂಪಿಸಲಾಗಿದೆ.

# ಹಳೇಕುಂದುವಾಡದಲ್ಲಿ ಇಂದಿನಿಂದ ದೇವಸ್ಥಾನ ಉದ್ಘಾಟನೆ, ಶಿಲಾಮೂರ್ತಿ ಪ್ರಾಣ ಪ್ರತಿಷ್ಠಾಪನೆ, ಕಳಸಾರೋಹಣ

ದಾವಣಗೆರೆ, ಫೆ.12- ತಾಲ್ಲೂಕಿನ ಹಳೇಕುಂದುವಾಡ ಗ್ರಾಮದ ಆಂಜನೇಯ ಸ್ವಾಮಿ ಹಾಗೂ ಬಸವೇಶ್ವರ ದೇವಸ್ಥಾನದ ಉದ್ಘಾಟನೆ, ಶಿಲಾಮೂರ್ತಿ ಪ್ರತಿಷ್ಠಾಪನೆ ಮತ್ತು ಕಳಸಾರೋಹಣ ಕಾರ್ಯಕ್ರಮವು ನಾಳೆ ದಿನಾಂಕ 13ರಿಂದ 17ರ ವರೆಗೆ ನಡೆಯಲಿದೆ ಎಂದು ಬಸವ ಆಂಜನೇಯ ಅಭಿವೃದ್ಧಿ ಸಮಿತಿ ಅಧ್ಯಕ್ಷ ಹೆಚ್.ಜಿ. ಗಣೇಶಪ್ಪ ತಿಳಿಸಿದರು.





ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಿನಾಂಕ 13ರಿಂದ 16ರ ವರೆಗೆ ಒಟ್ಟು 4 ದಿನಗಳ ಕಾಲ ಪ್ರತಿ ದಿನ ದೇವರಿಗೆ ವಿವಿಧ ಪೂಜಾ ಕೈಂಕರ್ಯಗಳು ಹಾಗೂ ಅನ್ನ ಸಂತರ್ಪಣೆ ನಡೆಯಲಿದೆ ಎಂದು ಹೇಳಿದರು.

ದಿನಾಂಕ 17ರ ಬೆಳಗ್ಗೆ 11 ಗಂಟೆಗೆ ಧಾರ್ಮಿಕ ಸಭೆ ನಡೆಯಲಿದ್ದು, ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಕನಕ ಗುರು ಪೀಠದ ನಿರಂಜನಾನಂದಪುರಿ ಶ್ರೀಗಳು, ಹೊಸದುರ್ಗ ಕನಕ ಗುರುಪೀಠ ಶಾಖಾ ಮಠದ ಈಶ್ವರಾನಂದ ಶ್ರೀಗಳು, ಮುರುಘರಾಜೇಂದ್ರ ಮಠದ ಬಸವ ಪ್ರಭು ಶ್ರೀ, ಚಂದ್ರಗಿರಿ ಮಠದ ಮುರುಳೀಧರ ಶ್ರೀ, ಹರಿಹರ ಪಂಚಮಸಾಲಿ ಪೀಠದ ವಚನಾನಂದ ಶ್ರೀ, ವಾಲ್ಮೀಕಿ ಗುರು ಪೀಠದ ಪ್ರಸನ್ನಾನಂದ ಶ್ರೀ, ಆವರಗೊಳ್ಳದ ಓಂಕಾರ ಶಿವಾಚಾರ್ಯ ಶ್ರೀ, ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಶ್ರೀ, ಮಾಚಿದೇವ ಮಹಾಸಂಸ್ಥಾನ ಮಠದ ಬಸವ ಮಾಚಿದೇವ ಶ್ರೀ ಮತ್ತು ಚಲವಾದಿ ಗುರುಪೀಠದ ಬಸವ ನಾಗಿದೇವ ಶ್ರೀಗಳು ದಿವ್ಯ ಸಾನ್ನಿಧ್ಯ ವಹಿಸುವರು. ಧಾರ್ಮಿಕ ಸಭೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಉದ್ಘಾಟಿಸಲಿದ್ದು, ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್, ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ, ಎಸ್.ಎ. ರವೀಂದ್ರನಾಥ ಸೇರಿದಂತೆ, ಇತರೆ ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಕಾರ್ಯದರ್ಶಿ ಹೆಚ್.ಜಿ. ಮಂಜಪ್ಪ, ಮಾಜಿ ಮೇಯರ್ ಹೆಚ್.ಎನ್ ಗುರುನಾಥ್, ಎಪಿಎಂಸಿ ಮಾಜಿ ನಿರ್ದೇಶಕ ಜೆ. ಮಾರುತಿ, ಹಿರಿಯ ಮುಖಂಡ ಹೆಚ್.ಬಿ. ಅಣ್ಣಪ್ಪ, ಹೆಚ್.ಜಿ ದೊಡ್ಡಪ್ಪ, ಗೌಡ್ರು ಬಸವರಾಜಪ್ಪ, ಸಿದ್ದನಗೌಡ್ರು, ಬಾರಿಕರ ಚಂದ್ರಪ್ಪ, ಯು.ವಿ ಶ್ರೀನಿವಾಸ್, ಡಿ.ಎಸ್.ಎಸ್ ಮಂಜುನಾಥ್, ಹೆಚ್.ಎಸ್. ಶ್ರೀನಿವಾಸ್, ಜಿ.ಹೆಚ್. ಗಣೇಶ್, ಎಸ್.ಬಿ. ವಿಜಯ್, ತಡಿಕೆಪ್ಪರ್ ನಿಂಗಪ್ಪ, ಹೆಚ್.ಎಸ್. ಉಮಾಪತಿ, ಮಧು ನಾಗರಾಜ್ ಹಾಗೂ ಇತರರು ಇದ್ದರು.

# ಬಾಂಗ್ಲಾ : ತಸ್ಲೀಮಾ ಪುಸ್ತಕ ಮಾರುತ್ತಿದ್ದ ಅಂಗಡಿ ಧ್ವಂಸ

ಢಾಕಾ, ಫೆ. 12 - ಬಾಂಗ್ಲಾ ದೇಶದ ಲೇಖಕಿ ತಸ್ಲೀಮಾ ನಸ್ರೀನ್ ಅವರ ಪುಸ್ತಕಗಳನ್ನು ಮಾರುತ್ತಿದ್ದ ಅಂಗಡಿಯನ್ನು ಪ್ರತಿಭಟನಾಕಾರರ ಗುಂಪೊಂದು ಧ್ವಂಸಗೊಳಿಸಿದೆ. ಪುಸ್ತಕ ಪ್ರದರ್ಶನ ಮೇಳದಲ್ಲಿ ತಸ್ಲೀಮಾ ಅವರ ಚಿತ್ರ ಮಾರಾಟ ಮಾಡುತ್ತಿದ್ದ ಸಬ್ಯಸಾಚಿ ಪ್ರಕಾಶೋನಿ ಸ್ಟಾಲ್ ಅನ್ನು ಧ್ವಂಸಗೊಳಿಸಲಾಗಿದೆ. ತಸ್ಲಿಮಾ ನಸ್ರೀನ್ ಅವರು ಬಾಂಗ್ಲಾ ದೇಶದ ಮೂಲಭೂತವಾದಿಗಳ ಮಿಥ್ಯಾಚಾರವನ್ನು ಬಯಲಿಗೆ ಎಳೆಯುವ ಕೃತಿಗಳನ್ನು ಪ್ರಕಟಿಸಿದ್ದರು. ಇದರಿಂದ ಮೂಲಭೂತವಾದಿಗಳು ನಸ್ರೀನ್ ಅವರ ಮೇಲೆ ಆಕ್ರೋಶಗೊಂಡಿದ್ದರು. ನಂತರ ಅವರು ಬಾಂಗ್ಲಾದೇಶ ತೊರೆದಿದ್ದರು.

# ಉಕ್ರೇನ್ ಸಮರ ಅಂತ್ಯದ ಮಾತುಕತೆಗೆ ಪುಟಿನ್ ಸಮ್ಮತಿ : ಟ್ರಂಪ್

ವಾಷಿಂಗ್ಟನ್, ಫೆ. 12 - ಉಕ್ರೇನ್ ಸಮರವನ್ನು ಅಂತ್ಯಗೊಳಿಸುವ ಕುರಿತು ಸಂಧಾನ ನಡೆಸಲು ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುತಿನ್ ಸಮ್ಮತಿಸಿದ್ದಾರೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಪುತಿನ್ ಜೊತೆ ಮಾತುಕತೆ ನಡೆಸಿದ ನಂತರ ಹೇಳಿಕೆ ನೀಡಿರುವ ಟ್ರಂಪ್, ನಾವಿಬ್ಬರು ನಿಕಟವಾಗಿ ಈ ದಿಸೆಯಲ್ಲಿ ಕಾರ್ಯನಿರ್ವಹಿಸಲಿದ್ದೇವೆ ಎಂದು ಹೇಳಿದ್ದಾರೆ.


**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಲೇಔಟ್‌ನಲ್ಲಿ 30x50 west, 30x50 ಅಕ್ಕ-ಪಕ್ಕ, ಜೆ.ಹೆಚ್.ಪಟೇಲ್ ಬಡಾವಣೆಯಲ್ಲಿ 50x80 South, 30x50 West, 30x40 West, ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ರಶ್ಮಿ ಸ್ಕೂಲ್ ಪಕ್ಕದಲ್ಲಿ 30x55 ಸೈಟು ಮಾರಾಟಕ್ಕೆ**
30x70 (2) ರಶ್ಮಿ ಸ್ಕೂಲ್ ಹಿಂದೆ 40x50 ಕಾರ್ನರ್ ಸೈಟ್ (2) ಸರ್ಕಾರಿ ನೌಕರರ ಬಡಾವಣೆ 40x60, 40x82, 30x55 ಗ್ಲಾಸ್ ಹೌಸ್. 40x55 ಪಿ.ಜೆ. ಬಡಾವಣೆ (ಕಮರ್ಷಿಯಲ್), 40x80 (ಕಮರ್ಷಿಯಲ್) (120 ಅಡಿ) ಬಾಲಾಜಿ ಲೇಔಟ್
ವೀರೇಶ್ - 76768 57676

**ಟೆಕ್ನೀಷಿಯನ್ ಬೇಕಾಗಿದ್ದಾರೆ**
ಸಂಪರ್ಕಿಸಿ : ಪ್ರೀಮಿಯರ್ ಕಮ್ಯುನಿಕೇಷನ್ಸ್ ಪಿ.ಜೆ. ಬಡಾವಣೆ, 4ನೇ ಮೇನ್, 9ನೇ ಕ್ರಾಸ್, ನಂದಿ ಆಸ್ಪತ್ರೆ ಪಕ್ಕ, ದಾವಣಗೆರೆ.
ಮೊ. 98806-99666

**ಸೈಟ್ ಮಾರಾಟಕ್ಕಿದೆ**
ಶಾಮನೂರು ಶಿವ - ಪಾರ್ವತಿ ಬಡಾವಣೆ, 5ನೇ ಮುಖ್ಯ ರಸ್ತೆಯಲ್ಲಿ ಉತ್ತರಾಭಿಮುಖವಾಗಿರುವ 30x50 ಅಳತೆಯುಳ್ಳ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ :
99862-02299

**ಸಿಂಗಲ್ ಬೆಡ್ ರೂಂ ಮನೆ ಲೀಸ್‌ಗೆ ಇದೆ**
ನಗರದ ಮಧ್ಯ ಭಾಗದಲ್ಲಿರುವ ವಿಟ್ರಿಫೈಡ್ ಫ್ಲೋರಿಂಗ್, ಆ್ಯಂಟಿ ಸ್ಕಿಡ್ ಬಾತ್ ರೂಂ ಟೈಲ್ಸ್ ಹೊಂದಿರುವ ಮನೆ. ಸಸ್ಯಹಾರಿಗಳಿಗೆ ಮಾತ್ರ.
63615 12585

**ಬೇಕಾಗಿದ್ದಾರೆ**
ಹೋಲ್‌ಸೇಲ್ ಮೆಡಿಕಲ್ ಫಾರ್ಮಾದಲ್ಲಿ ಆಫೀಸ್ ಕೆಲಸ ಮಾಡಲು SSLC ಅಥವಾ PUC ಪಾಸ್ ಅಥವಾ ಫೇಲ್ ಆದ 30 ವರ್ಷ ಒಳಗಿನ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಉದ್ಯೋಗಾರ್ಥಿಗಳು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ
85119 58321, 77995 77272

**ಸಣ್ಣ ಸಣ್ಣ ಸೈಟುಗಳು ಮಾರಾಟಕ್ಕಿವೆ**
ನೂತನ ಕಾಲೇಜು ಹತ್ತಿರ, 24x45 West, ವಿದ್ಯಾನಗರದಲ್ಲಿ 30x33 South, ಎಸ್.ಎಸ್. 'ಬಿ' ಬ್ಲಾಕ್‌ನಲ್ಲಿ 20x30 North ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ಪಿಯುಸಿ ಆಗಿರುವ ಹುಡುಗರು/ ಹುಡುಗಿಯರು ಕೌಂಟರ್ ಸೇಲ್ಸ್‌ಮನ್ ಹುದ್ದೆಗೆ ಬೇಕಾಗಿದ್ದಾರೆ. ಬಯೋಡಾಟಾ, ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
ಆರ್ಚೀಸ್ ಗ್ಯಾಲರಿ
ಶರಾವತಿ ಲೇಡಿಸ್ ಹಾಸ್ಟೆಲ್ ಎದುರು, ಮಾಮಾಸ್ ಜಾಯಿಂಟ್ ರಸ್ತೆ, ದಾವಣಗೆರೆ.
ಮೊ : 96324-33166

**ಜನ್ಮಾಂತರ ಆತ್ಮ ಚಿಕಿತ್ಸೆ**
ಬಿಪಿ, ಶುಗರ್, ಡಿಪ್ರೆಶನ್, ಮೈಗ್ರೇನ್, ಕ್ಯಾನ್ಸರ್, ಕಿಡ್ನಿ ತೊಂದರೆ, ಅಸ್ತಮಾ, ಸೋರಿಯಾಸಿಸ್, ಡ್ರಗ್ಸ್ ಮುಂತಾದ ದುಶ್ಚಟಗಳು, ಗ್ರಹದೋಷ, ನಾಗದೋಷ, ಮಾಟ ಮಂತ್ರ, ಭೂತ ಪ್ರೇತಗಳ ಭಯ ಹಾಗೂ ಹಿಂದಿನ ಜನ್ಮಗಳ ದೋಷಗಳ ಸಂಪೂರ್ಣ ನಿವಾರಣೆಗಾಗಿ (ವ್ಯಕ್ತಿ ಎಷ್ಟೇ ದೂರದಲ್ಲಿದ್ದರೂ ಡಿಸ್ಟೆನ್ಸ್ ಹೀಲಿಂಗ್ ಮಾಡುತ್ತೇವೆ)
80733 42011

**ಕೆಲಸಕ್ಕೆ ಬೇಕಾಗಿದ್ದಾರೆ**
ಪುರುಷ ಮತ್ತು ಮಹಿಳೆಯರು ಸೆಕ್ಯೂರಿಟಿ ಗಾರ್ಡ್ಸ್ ಕೆಲಸಕ್ಕೆ ಬೇಕಾಗಿದ್ದಾರೆ. ಆಕರ್ಷಕ ಸಂಬಳವಿರುತ್ತದೆ.
81056 99985, 89715 04492

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**TUITIONS**
CBSE / ICSE Boards Class 8th, 9th, 10th
CRASH COURSES FOR NEET / CET / IIT - JEE PUC I / PUC II / PCMB
NEET Long Term / Supplementary Exams
97398 65711, 94822 44114

**ಶ್ರೀ ಸಾಯಿಬಾಬ ಬೋರ್‌ವೆಲ್**
ಮನೆ ಒಳಗಡೆ ಹಾಗೂ ಹೊರಗಡೆ ಸ್ಟ್ಯಾಂಡ್ ಬೋರ್ 300 ಅಡಿಯಿಂದ 450 ಅಡಿ ವರೆಗೂ ಕೊರೆಯಲಾಗುವುದು.
99640 78484
95906 15776

**ತಕ್ಷಣ ಬೇಕಾಗಿದ್ದಾರೆ**
ಭತ್ತ ಕೊಯ್ಯುವ ಯಂತ್ರ ನೋಡಿಕೊಳ್ಳಲು SSLC & PUC ಓದಿರುವ ಹಿಂದಿ ಭಾಷೆಯುಳ್ಳ ಯುವಕರು ಬೇಕಾಗಿದ್ದಾರೆ. (ಸೂಪರ್ ವೈಸರ್) ಊಟ, ವಸತಿ ಆಕರ್ಷಕ ಸಂಬಳ. ಬೈಕ್‌ವುಳ್ಳವರಿಗೆ ಮೊದಲ ಆದ್ಯತೆ.
94823 89317, 78996 10253

**ವಯೋವೃದ್ಧರ ಆರೈಕೆ ಕೇಂದ್ರ**
**ಓಲ್ಡ್ ಏಜ್ ಕೇರ್ ಸೆಂಟರ್**
ಸೀನಿಯರ್ ಸಿಟಿಜನ್ ಕೇರ್ ಸೆಂಟರ್
**(OLD AGE CARE CENTRE)**
ನಮ್ಮಲ್ಲಿ 40 ವರ್ಷ ಮೇಲ್ಪಟ್ಟ ವಯೋವೃದ್ಧರು/ವೃದ್ಧೆಯರು ನಿವೃತ್ತಿ ಹೊಂದಿದವರು ಹಾಗೂ ಖಾಸಗಿ ಜೀವನ ನಡೆಸಲು ಇಚ್ಛೆ ಇರುವವರು, ನಮ್ಮ ಆರೈಕೆ ಕೇಂದ್ರಕ್ಕೆ ಸೇರಬಹುದು.
ನಮ್ಮಲ್ಲಿ ಸಿಗುವ ಸೌಲಭ್ಯಗಳು
1. ನಮ್ಮಲ್ಲಿ ರುಚಿಕರ ಊಟ ಮತ್ತು ಸುಸಜ್ಜಿತ ವಸತಿ ಇರುತ್ತದೆ.
2. ಪ್ರತಿದಿನ ವ್ಯಾಯಾಮ, ಯೋಗಾಸನ, ಧ್ಯಾನ ಇರುತ್ತದೆ.
3. ನಮ್ಮಲ್ಲಿ ಪ್ರತಿ ರೂಂ. ನಲ್ಲಿ ಟಿ.ವಿ. ಸೌಲಭ್ಯ ಇರುತ್ತದೆ.
4. ನಮ್ಮಲ್ಲಿ ವಿಶೇಷವಾಗಿ ಸ್ಪೆಷಲ್ ರೂಂ, ಡಬಲ್ ಶೇರಿಂಗ್ ರೂಂ. ಹಾಗೂ ಜನರಲ್ ರೂಂ ಸೌಲಭ್ಯ ಇರುತ್ತದೆ.
5. ಪ್ರತಿ ದಿನ ವೈದ್ಯರು, ಶುಶೂಕರ ಭೇಟಿ ನೀಡುತ್ತಾರೆ
6. ನಮ್ಮಲ್ಲಿ ಪೇಶೆಂಟ್ ಕೇರ್ ಇರುತ್ತದೆ.
7. ಇನ್ನು ಇತರೇ ಸೌಲಭ್ಯಗಳು ದೊರೆಯುತ್ತದೆ.
Scan for Location
ನಮ್ಮ ಕೇರ್ ಸೆಂಟರ್‌ಗೆ ಸೇರಲು ಇಚ್ಛೆ ಇರುವವರು ಕೆಳಗೆ ಸೂಚಿಸಿರುವ ಮೊಬೈಲ್ ನಂಬರ್‌ಗೆ ಕರೆ ಮಾಡಿ ಸೇರಿಕೊಳ್ಳಬಹುದು.
Dr. H.V Venkatesh, ಸಂಸ್ಥಾಪಕರು (ಅಧ್ಯಕ್ಷರು)
+91 89711 92936

**ಮಾರಾಟಕ್ಕಿದೆ**
ಸಿಮೆಂಟ್ ಇಟ್ಟಿಗೆ ಮಿಷನ್ ಮಾರಾಟಕ್ಕಿದೆ.
94489 24273

**ಮನೆ ಮಾರಾಟಕ್ಕೆ**
ಮಲ್ಲಿಗೆ ಹೆಲ್ತ್ ಸೆಂಟರ್ ಪಿ.ಜೆ. ಬಡಾವಣೆ, 8ನೇ ಮೇನ್, 8ನೇ ಕ್ರಾಸ್, #402, ಅಳತೆ 25x100 ಅಡಿ ಉತ್ತರಾಭಿಮುಖ.
96117 94684, 86187 07118

**ಬೇಕಾಗಿದ್ದಾರೆ**
ಪಾಲಿ ಕ್ಲಿನಿಕ್‌ಗೆ ಮಾರ್ಕೆಟಿಂಗ್ ಮಾಡಲು ಹುಡುಗರು ಬೇಕಾಗಿದ್ದಾರೆ. ಸ್ವಂತ ಬೈಕ್ ಹೊಂದಿದ್ದವರಿಗೆ ಆದ್ಯತೆ.
98455 84489

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಮನೆ ಕೆಲಸಕ್ಕೆ ಬೇಕಾಗಿದ್ದಾರೆ**
ವಯೋವೃದ್ಧರನ್ನು ನೋಡಕೊಳ್ಳಲು ಸ್ಪಿಫ್ಟ್‌ವೈಜ್ ಕೆಲಸ ಮಾಡಲು ಪುರುಷ, ಮಹಿಳೆಯರು ಬೇಕಾಗಿದ್ದಾರೆ. ವಯೋವೃದ್ಧರ ಆರೈಕೆ ಕೇಂದ್ರ
89711 92936

**ಜಾಗ ಮಾರಾಟಕ್ಕಿದೆ**
ಶಿರಮಗೊಂಡನಹಳ್ಳಿ ಹತ್ತಿರ 10000 ಅಡಿ ಕಮರ್ಷಿಯಲ್ ಜಾಗ ಮಾರಾಟಕ್ಕೆ ಇದೆ.
99862 34416

**HOUSE FOR LEASE**
New 1BHK fully furnished House for lease, East facing In S.S. Layout 'A 'block for non-veg also available.
99724 26415, 93800 17419

**ಅಧಿಕೃತ ಚೀಟಿ ಸಂಸ್ಥೆ**
ರೂ. 5 ಲಕ್ಷ ಚೀಟಿ ಪ್ರಾರಂಭ 50 ಸದಸ್ಯರು 6,500/- ರಿಂದ 10,000 /- ರೂ ವರೆಗೆ,
ಸ್ಕಂದ ಚಿಟ್ ಫಂಡ್ಸ್- (ರಿ)
ದಾವಣಗೆರೆ.
78997 75159

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಸೆಕ್ಯೂರಿಟಿ/ಕ್ಲಿನಿಂಗ್ ಕೆಲಸ. ವಯಸ್ಸು 20 ರಿಂದ 30 ವರ್ಷ, ಸಂಬಳ : ರೂ. 12,000/-, ವಸತಿ ವ್ಯವಸ್ಥೆ ಇರುತ್ತದೆ. ಸಂಪರ್ಕಿಸಿ :
97400 98047

**ಮನೆ ಮಾರಾಟಕ್ಕಿದೆ**
ಅಳತೆ 30x50 ಬಾಲಾಜಿ ಬಡಾವಣೆ, ದಾವಣಗೆರೆ.
81058 65556
96208 08309

**AdBlue / DEF**
available with Best Quality & Price for All BS6 Diesel Commercial & Passanger Vehicles
Visit: Best Lubricants
Opp. to New Pvt Bus Stand PB Road, Davangere.
73380 33337

**1946 ಕೆಲಸಕ್ಕೆ ಬೇಕಾಗಿದ್ದಾರೆ**
ಟೀ ಹಾಗೂ ಕಾಫಿ ಮಾಡುವವರು ಹಾಗೂ ಜವಾಬ್ದಾರಿ ಕೆಲಸಗಾರರು ಬೇಕಾಗಿದ್ದಾರೆ. ಸ್ಥಳ : 1946 ಪ್ರಕಾಶ್ ಕಾಫಿ ವರ್ಕ್ಸ್ ದಾವಣಗೆರೆ.
99004 38052, 97401 53513

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಸೋಫಾ, ಕುಶನ್, ಕಿಟಕಿಗೆ ಫೈಬರ್ ವೆಲ್ಕ್ರೊ ಮೆಶ್ & ಅಲ್ಯುಮಿನಿಯಂ ಫ್ರೇಮ್ stainless steel ಸೊಳ್ಳೆಮೆಶ್ ಹಾಕಲಾಗುವುದು.
Swapna cushion work
ಮಹಾರಾಜ ಪೇಟೆ ದಾವಣಗೆರೆ.
98445- 81966

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**CRASH COURSE FOR CLASS 10 CBSE / STATE**
* End of March to Mid of May, * 5 1/2 hrs. of effective teaching each day, * Maths & Science
Pi Academy, DVG-04
Sri S. Nijalingappa Layout.
99642 29344, 89513 67178
95911 27363

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಹೋಮ್ ನರ್ಸಿಂಗ್ ಸರ್ವೀಸ್**
ವಯೋವೃದ್ಧರು ಬೆಡ್ ರಿಡನ್ ಪೇಷೆಂಟ್‌ಗಳಿಗೆ ಬೆಳಿಗ್ಗೆ ಮತ್ತು ಸಂಜೆ ಬಂದು ಡೈಪರ್ ಚೇಂಜ್ ಮಾಡುವುದು. ಸ್ಪಾಂಜ್ ಬಾತ್ (ಸ್ನಾನ) ಆಯಿಲ್ ಮಸಾಜ್ ಮಾಡಲಾಗುತ್ತದೆ.
85508 36642

**ಮನೆ ಕೆಲಸಕ್ಕೆ ಬೇಕಾಗಿದ್ದಾರೆ**
ಆಕರ್ಷಕ ಸಂಬಳ ನೀಡಲಾಗುವುದು
ಸಂಪರ್ಕಿಸಿ :
94496 43555

# ದೇಶದ ಪರಂಪರೆ ಉಳಿದಿರುವುದೇ ಮಠಗಳಿಂದ



(3ನೇ ಪುಟದಿಂದ) ಆದರೆ ರೈತ ಮಾತ್ರ ಬಡವನಾಗಿದ್ದಾನೆ. ಆದ್ದರಿಂದ ರೈತರ ಬದುಕು ಹಸನಾಗಲು ತರಳಬಾಳು ಜಗದ್ಗುರುಗಳ ಮಾರ್ಗದರ್ಶನ ಅತ್ಯವಶ್ಯಕ ಎಂದು ಹೇಳಿದರು.

ಮಾಜಿ ಸಚಿವ ಜೆ.ಸಿ. ಮಾಧುಸ್ವಾಮಿ ಮಾತನಾಡಿ, ತರಳಬಾಳು ಜಗದ್ಗುರುಗಳ ರೈತರ ಬಗೆಗಿನ ಕಾಳಜಿಯಿಂದಾಗಿ ಸರ್ಕಾರದ ಸಂಬಂಧಿಸಿದ ಸಚಿವರೊಂದಿಗೆ ಸಂಪರ್ಕ ಮಾಡಿ, ಕೆರೆಗಳಿಗೆ ನೀರು ತುಂಬಿಸುವ ಯೋಜನೆಯನ್ನು ಅನುಷ್ಠಾನಕ್ಕೆ ತಂದು ರೈತರ ಬದುಕಿಗೆ ಆಸರೆಯಾಗಿದ್ದಾರೆಂದು ತಿಳಿಸಿದರು.

ವಾಗ್ಮಿ ಪ್ರೊ. ಎಂ. ಕೃಷ್ಣೇಗೌಡ, ಇಸ್ರೋ ವಿಜ್ಞಾನಿ ಡಾ. ಬಿ.ಎನ್. ಸುರೇಶ್, ಬೆಂಗಳೂರು ವಿಭಾ ಅಕಾಡೆಮಿಯ ಸಂಸ್ಕೃತ ಮತ್ತು ಇಂಡಾಲಜಿ ವಿದ್ವಾಂಸರಾದ ಬಿ.ವಿ. ಆರತಿ, ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷ ಶಿವಶಂಕರ್ ಸಾಹುಕಾರ್, ವಾರಣಾಸಿಯ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಬೆಟಿನಾ ಬಾಯ್ಕರ್, ಮೈಸೂರಿನ ಸಾಹಿತಿ ಡಾ.ಹೆಚ್. ಎಸ್. ಹರಿಶಂಕರ್, ರಷ್ಯಾದ ಸಂಶೋಧನಾ ವಿದ್ಯಾರ್ಥಿನಿ ಗಲಿನ ಕೊಪೆಲಿಯೋವಿಚ್, ಸ್ವಿಜ್ಜರ್‌ಲ್ಯಾಂಡ್ ನಿವೃತ್ತ ಭೌತ ವಿಜ್ಞಾನಿ ಡಾ. ಖಮರ್ ಮುನೀರ್, ಮುಂಬೈನ ಸೀನಿಯರ್ ಕಮಾಂಡರ್ ಏರ್‌ಇಂಡಿಯಾದ ಕ್ಯಾಪ್ಟನ್ ಶಿಖಾ ಹರ್ನೆ, ಶಾಸಕರಾದ ಡಿ.ಜಿ. ಶಾಂತನಗೌಡ, ಯು.ಬಿ. ಬಣಕಾರ್ ಮಾತನಾಡಿದರು.

ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಎಂ. ಚಂದ್ರಪ್ಪ, ವಿಯನ್ನಾ ಭಾರತೀಯ ರಾಯಭಾರಿ ಕಚೇರಿ ಮಾಜಿ ಅಧಿಕಾರಿ ಆಸೀಮ್ ನಾಥ್ ಮುಖರ್ಜಿ, ರೈತ ಮುಖಂಡ ಹೆಚ್.ಆರ್. ಬಸವರಾಜಪ್ಪ, ಡಾ. ರಾಜನಾಥ್ ಸಿಂಗ್, ಶಾಸಕ ಕೆ.ಎಸ್. ಬಸವಂತಪ್ಪ, ಜಿ.ಎಸ್. ಅನಿತ್ ಕುಮಾರ್, ತುಮ್‌ಕೋಸ್ ನಿರ್ದೇಶಕ ಶಿವಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಇದೇ ವೇಳೆ ಹುತಾತ್ಮ ಯೋಧರ ಕುಟುಂಬಗಳಿಗೆ ತಲಾ ಒಂದು ಲಕ್ಷ ರೂ. ಗಳೊಂದಿಗೆ ಗೌರವ ಸಮರ್ಪಿಸಿದರು. ಶೈಲೇಶ್ ಕುಮಾರ್ ಸ್ವಾಗತಿಸಿದರು. ಕೊಗುಂಡೆ ಮಂಜಣ್ಣ ವಂದಿಸಿದರು.

## ರಾಜ್ಯಪಾಲರ ಹುದ್ದೆ ನೀಡಲಿ

(3ನೇ ಪುಟದಿಂದ) ಜಾರಿಯಾದ ಮೇಲೆ ಮೈಸೂರಿನ ಅರಸರು ರಾಜ್ಯವನ್ನು ಉದಾರ ಮನಸ್ಸಿನಿಂದ ಸರ್ಕಾರಕ್ಕೆ ಬಿಟ್ಟುಕೊಟ್ಟರು. ಹಾಗಾಗಿ ಅವರನ್ನು ಗೌರವಿಸುವ ಅವಶ್ಯವಿದೆ. ಆದರೆ ರಾಜಮನೆತನಕ್ಕೆ ವಿನಾಕರಾಣ ಕಿರಿಕಿರಿ ಉಂಟುಮಾಡುತ್ತಿರುವುದು ಸರಿಯಲ್ಲ ಎಂದರು.

ಇಂಗ್ಲೆಂಡ್‌ನಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಇದ್ದರೂ ಸಹ ಅಲ್ಲಿನ ಮಹಾರಾಜರು ಹೆಡ್ ಆಫ್ ದಿ ಸ್ಟೇಟ್ ಆಗಿದ್ದಾರೆ. ಅನೇಕ ದೇಶಗಳಲ್ಲಿ ಈ ವ್ಯವಸ್ಥೆ ಕೂಡ ಜಾರಿಯಲ್ಲಿದೆ ಎಂದು ಹೇಳಿದರು.

ಚಿತ್ರದುರ್ಗ ಜಿಲ್ಲೆಗೂ ಮೈಸೂರು ರಾಜ ಮನೆತನಕ್ಕೂ ನಿಕಟ ಸಂಪರ್ಕವಿತ್ತು. ವಾಣಿವಿಲಾಸ ಸಾಗರ, ರಾಣಿಕೆರೆ, ಗಾಯತ್ರಿ ಜಲಾಶಯ ಕಟ್ಟಿಸಿದವರು ಮೈಸೂರು ಮಹಾರಾಜರು ಎಂದರು. 60 ವರ್ಷಗಳ ಹಿಂದೆ ಚಿತ್ರದುರ್ಗದಲ್ಲಿ ನಡೆದ ತರಳಬಾಳು ಹುಣ್ಣಿಮೆ ಮಹೋತ್ಸವಕ್ಕೆ ಯಧುವೀರರ ತಾತನವರಾದ ಜಯಚಾಮರಾಜ ಒಡೆಯರ್ ಪಾಲ್ಗೊಂಡಿದ್ದರು ಎಂಬುದನ್ನು ಸ್ಮರಿಸಿಕೊಂಡರು.

## ಶಿಥಿಲಗೊಳ್ಳುತ್ತಿರುವ ಕೌಟುಂಬಿಕ ಜೀವನ

**(3ನೇ ಪುಟದಿಂದ) ಕುಳಿತಿರುವುದನ್ನು ನೋಡಿದರೆ ತಮ್ಮ ಮೇಲೆ ಇಟ್ಟಿರು ಅಗಾಧವಾದ ಭಕ್ತಿ ಕಾರಣ. ಭಾವನಾತ್ಮಕ ಸಂಬಂಧ ಇರುವವರೆಗೂ ನಾವು ಗಟ್ಟಿಯಾಗಿಯೇ ಇರುತ್ತೇವೆ ಎಂದರು.**

# ಹರಪನಹಳ್ಳಿ ತಾ. ದೊಡ್ಡಮೈಲಾರ ಲಿಂಗೇಶ್ವರ ಕಾರಣಿಕೋತ್ಸವ

ಹರಪನಹಳ್ಳಿ, ಫೆ.12- 'ಮುತ್ತಿನ ರಾಶಿಗೆ ಮಂಜು ಮುಸುಕೀತಲೇ ಪರಾಕ್' ಇದು ಪಟ್ಟಣದ ಹೊರವಲಯದಲ್ಲಿ ಬುಧವಾರ ನಡೆದ ಇತಿಹಾಸ ಪ್ರಸಿದ್ದ ದೊಡ್ಡಮೈಲಾರ ಲಿಂಗೇಶ್ವರ ಕಾರಣಿಕೋತ್ಸವ ದಲ್ಲಿ ಗೊರವಯ್ಯ ಕೋಟೆಪ್ಪ ನುಡಿದ ದೈವವಾಣಿ.

ಭರತ ಹುಣ್ಣಿಮೆ ಅಂಗವಾಗಿ ದೊಡ್ಡ ಮೈಲಾರ ಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ನೂರಾರು ಗೊರವಪ್ಪಗಳ ಢಮರುಗದ ನಿನಾದ, ನೆರೆದಿದ್ದ ಸಾವಿರಾರು ಭಕ್ತರ 'ಏಳು ಕೋಟಿ.. ಏಳು ಕೋಟಿ.. ಚಹಾಂಗ ಬಲೋ..' ಭಕ್ತಿಯ ಘೋಷಮಯವಾಗಿತ್ತು.

ಬೆಳಿಗ್ಗೆಯಿಂದ ಮರಡಿ ಕಟ್ಟೆಯಲ್ಲಿ ಸ್ವಾಮಿಯನ್ನು ಪ್ರತಿಷ್ಠಾಪಿಸಿ, ಪೂಜೆ ಸಲ್ಲಿಸಲಾಯಿತು. ಮಧ್ಯಾಹ್ನ ಆಚರಿಸಿದ ಬೆಲ್ಲದ ಬಂಡಿ ಉತ್ಸವದಲ್ಲಿ ಭಕ್ತರು ಎತ್ತಿನ ಬಂಡಿಗಳನ್ನು ಓಡಿಸಿ ಭಕ್ತಿ ಸಮರ್ಪಿಸಿದರು.

9 ದಿನ ಉಪವಾಸ ವ್ರತ ಆಚರಿಸಿದ್ದ ಗೊರವಯ್ಯ ಕೋಟೆಪ್ಪ ಅವರನ್ನು ಪಾದಗಟ್ಟೆಯ ಮರಡಿಯಿಂದ ಮೆರವಣಿಗೆ ಮೂಲಕ ಕರೆತರಲಾಯಿತು. ಬಿಲ್ಲನ್ನೇರಿ ಸದ್ದಲೇ ಎನ್ನುತ್ತಿದ್ದಂತೆ ನೆರೆದವರೆಲ್ಲ ನಿಶ್ಯಬ್ದವಾದರು. ಕಾರಣಿಕ ನುಡಿದು ಕೆಳಗೆ ಬೀಳುತ್ತಿದ್ದಂತೆ ಅವರನ್ನು ಗೊರವ ಸಮೂಹ ಎತ್ತಿ ಹಿಡಿದು ಸಂಭ್ರಮಿಸಿದರು.

ಭರತ ಹುಣ್ಣಿಮೆ ಮೈಲಾರ ಲಿಂಗೇಶ್ವರನ ಭಕ್ತರಿಗೆ ಮಹತ್ವದ್ದು. ದುಷ್ಟ ಸಂಹಾರ ಶಿಷ್ಟರ ರಕ್ಷಣೆಗಾಗಿ ಮಾರ್ತಾಂಡ ಭೈರವನ ರೂಪದಲ್ಲಿ ಧರೆಗೆ ಬಂದ ಭಗವಂತ, ಮಣಿ ಮಲ್ಲಾಸುರರ ಸಂಹಾರ ಮಾಡಿ, ಮರಳಿ ಕೈಲಾಸಕ್ಕೆ ಹೋಗುತ್ತಿರಲು ಪುರಜನರು ಇಲ್ಲೇ ನೆಲೆಸುವಂತೆ ಮೊರೆ ಇಡುತ್ತಾರೆ.

ಭಕ್ತರ ಭಕ್ತಿಗೆ ಮಣಿದ ಭಗವಂತ ಮಣಿಚೂಲ ಪರ್ವತ ದಲ್ಲಿ ಲಿಂಗರೂಪದಲ್ಲಿ ನೆಲೆಸಿ, ನನ್ನನ್ನು ಸ್ಮರಣೆ ಮಾಡುವ ಭಕ್ತರ ಹಿಂದೆ ನಾನು ಸದಾ ಇದ್ದು ಅವರ ಇಷ್ಟಾರ್ಥಗಳನ್ನು ಈಡೇರಿಸುತ್ತೇನೆ, ಗಂಗೆ ಪಾರ್ವತಿಯರು ಗಂಗೆ ಮಾಳವ್ವರಾಗಿ ನೆಲೆಸುತ್ತಾರೆ.

ಧರ್ಮಕರ್ತರಾದ ದತ್ತಾತ್ರೇಯ ರಾವ್, ಮಾರ್ತಾಂಡ ರಾವ್, ಡಾ. ನಾಗೇಶ್ವರ ರಾವ್, ಕೋಟೇಶ್ವರ ರಾವ್, ಗಣಚಾರಿ ದುರುಗಪ್ಪ, ಪುರಸಭೆ ಸದಸ್ಯರಾದ ಕಿರಣ್ ಶ್ಯಾನಭೋಗ, ಗಣೇಶ, ಭರತೇಶ ಇತರರು ಇದ್ದರು.



# ಪರಾವಲಂಬಿ ವರ್ಗವನ್ನು ಸೃಷ್ಟಿಸುತ್ತಿಲ್ಲವೇ?

(3ನೇ ಪುಟದಿಂದ) ಮಾಡಲು ಬಯಸದ ಯಾರೊಬ್ಬರೂ ಈ ದೇಶದಲ್ಲಿ ಇಲ್ಲ ಎಂದರು.

ಆಗ ಮಾತನಾಡಿದ ನ್ಯಾಯಮೂರ್ತಿ ಗವಾಯಿ, ನೀವು ಒಂದು ಕಡೆಯ ಜ್ಞಾನವನ್ನು ಹೊಂದಿದ್ದೀರಿ. ನಾನು ಕೃಷಿ ಕುಟುಂಬದಿಂದ ಬಂದಿದ್ದೇನೆ. ಮಹಾರಾಷ್ಟ್ರದಲ್ಲಿ ಚುನಾವಣೆಗೆ ಮುಂಚೆ ಘೋಷಿಸಿರುವ ಉಚಿತ ಕೊಡುಗೆಗಳ ಕಾರಣದಿಂದಾಗಿ ಕೃಷಿಕರಿಗೆ ಕಾರ್ಮಿಕರೇ ಸಿಗುತ್ತಿಲ್ಲ ಎಂದು ಹೇಳಿದರು. ಆದರೆ, ಈ ವಿಷಯದಲ್ಲಿ ಚರ್ಚೆ ಮಾಡಲು ಬಯಸುವುದಿಲ್ಲ ಎಂದು ಪೀಠ ತಿಳಿಸಿತು.

ಕೇಂದ್ರ ಸರ್ಕಾರದ ಪರವಾಗಿ ಹಾಜರಿರುವ ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಸೇರಿದಂತೆ ನಾವೆಲ್ಲರೂ ನಿರ್ವಸಿತಗರಿಗೆ ಆಶ್ರಯ ನೀಡುವ ಬಗ್ಗೆ ಸಮಾನ ನಿಲುವು ಹೊಂದಿದ್ದೇವೆ ಎಂದು ಪೀಠ ತಿಳಿಸಿತು.

ಆದರೆ ಇದೇ ವೇಳೆ ಈ ವಿಷಯದಲ್ಲಿ ಸಮತೋಲನ ಇರಬೇಡವೇ? ಎಂದು ಪೀಠ ಪ್ರಶ್ನಿಸಿತು.

ಕೇಂದ್ರ ಸರ್ಕಾರದ ಪರವಾಗಿ ಹಾಜರಿದ್ದ ವೆಂಕಟರಮಣಿ, ಸರ್ಕಾರವು ನಗರ ಬಡತನ ನಿರ್ಮೂಲನೆ ಯೋಜನೆ ಅಂತಿಮಗೊಳಿಸುತ್ತಿದೆ. ಈ ಯೋಜನೆಯಲ್ಲಿ ವಸತಿ ಸೇರಿದಂತೆ ಎಲ್ಲಾ ವಿಷಯಗಳನ್ನು ಪರಿಗಣಿಸಲಾಗಿದೆ ಎಂದರು.

ವಸತಿ ರಹಿತರಿಗೆ ಯಾವ ಯೋಜನೆ ಅನ್ವಯವಾಗಲಿದೆ ಎಂಬ ವಿವರಗಳನ್ನು ಕೇಂದ್ರದಿಂದ ಪಡೆಯಬೇಕು ಹಾಗೂ ವಿವರಗಳನ್ನು ಸಲ್ಲಿಸಬೇಕು ಎಂದು ಪೀಠ ತಿಳಿಸಿತು.

ಈ ವಿಷಯವನ್ನು ರಾಷ್ಟ್ರಮಟ್ಟದಲ್ಲಿ ಪರಿಶೀಲಿಸುವ ಸಲುವಾಗಿ ಎಲ್ಲಾ ರಾಜ್ಯಗಳಿಂದಲೂ ಮಾಹಿತಿ ಪಡೆಯಬೇಕು ಎಂದು ಪೀಠ ಹೇಳಿತು.

ಈ ಹಂತದಲ್ಲಿ ಮಾತನಾಡಿದ ಅರ್ಜಿದಾರರೊಬ್ಬರು, ಸರ್ಕಾರ ವಸತಿರಹಿತರ ಸಮಸ್ಯೆ ಬಗೆಹರಿಸಲು ಆದ್ಯತೆ ನೀಡುತ್ತಿಲ್ಲ. ಸರ್ಕಾರಕ್ಕೆ ಇದು ಕೊನೆಯ ಆದ್ಯತೆಯಾಗಿದೆ ಎಂದರು.

ಈ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿದ ಪೀಠ, ಸರ್ಕಾರ ಕೇವಲ ಶ್ರೀಮಂತರ ಬಗ್ಗೆ ಮಾತ್ರ ಕಾಳಜಿ ಹೊಂದಿದೆ, ಬಡವರ ಬಗ್ಗೆ ಕಾಳಜಿ ಹೊಂದಿಲ್ಲ ಎಂದು ಹೇಳುವುದು ಸರಿಯಲ್ಲ ಎಂದಿತು.

ರಾಮಲೀಲಾ ಮೈದಾನದಂತೆ ಭಾಷಣ ಮಾಡಬೇಡಿ. ಇದು ನ್ಯಾಯಾಲಯ, ಅನಗತ್ಯ ಆರೋಪ ಮಾಡುವುದು ಬೇಡ. ಇಲ್ಲಿ ರಾಜಕೀಯ ಭಾಷಣ ಭಾಷಣದ ಅಗತ್ಯವಿಲ್ಲ. ನ್ಯಾಯಾಲಯವನ್ನು ರಾಜಕೀಯ ಸಮರದ ತಾಣ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ನ್ಯಾಯಮೂರ್ತಿ ಗವಾಯಿ ಹೇಳಿದರು.

# ಕರ್ನಾಟಕದ ಮೇಲೆ '3ಡಿ' ನೀತಿ

(3ನೇ ಪುಟದಿಂದ) ಹೊರೆ ಹೊತ್ತಿದ್ದಾರೆ. 2015 ರಿಂದ 2024ರ ಅವಧಿಯಲ್ಲಿ 24 ಲಕ್ಷ ಚಿಕ್ಕ ಮತ್ತು ಮಧ್ಯಮ ಕೈಗಾರಿಕೆಗಳು ಮುಚ್ಚಲ್ಪಟ್ಟಿವೆ. ವಿಕಸಿತ ಭಾರತ ಎಂಬ ಪರಿಕಲ್ಪನೆ ಸಂಪೂರ್ಣವಾಗಿ ಕಣ್ಮರೆಯಾಗಿದೆ ಎಂದು ಹೇಳಿದ್ದಾರೆ. ನಮ್ಮ ರೈತರು ಸಂಕಷ್ಟದಲ್ಲಿದ್ದಾರೆ. ನಬಾರ್ಡ್ ನ ಅನುದಾನವನ್ನು ಶೇ.58 ಕಡಿತ ಮಾಡಲಾಗಿದೆ. ಸಹಕಾರ ಬ್ಯಾಂಕುಗಳ ಸ್ಥಿತಿ ಶೋಚನೀಯವಾಗಿದೆ. ರೈತರ ನೆರವಿಗಾಗಿ ಸರ್ಕಾರ ಯಾವುದೇ ಸಹಾಯ ಮಾಡುತ್ತಿಲ್ಲ. ಎಂಎಸ್‌ಪಿ ಕಾನೂನಾಗಿ ಘೋಷಣೆ ಮಾಡದಿರುವುದರಿಂದ, ರೈತರು ಶೋಷಣೆಗೆ ಒಳಗಾಗುತ್ತಿದ್ದಾರೆ.

2025-26ನೇ ಹಣಕಾಸು ವರ್ಷದಲ್ಲಿ ಆರೋಗ್ಯ ಕ್ಷೇತ್ರಕ್ಕೆ ಶೇ.99.858 ಕೋಟಿ ಮಾತ್ರ ಮೀಸಲಿಡಲಾಗಿದೆ. ಇದು ಬಹಳ ಕಡಿಮೆ. ಭಾರತದ ಆರೋಗ್ಯ ವ್ಯಯ ಜಿಡಿಪಿ ನ ಕೇವಲ ಶೇ.2 ಮಾತ್ರ. ವೈದ್ಯಕೀಯ ದರ ಏರಿಕೆ ಶೇ.14 ತಲುಪಿದೆ. ಇದು ಏಷ್ಯಾದ ರಾಷ್ಟ್ರಗಳಲ್ಲೇ ಅತಿ ಹೆಚ್ಚು. ದೇಶದಲ್ಲಿರುವ ಆಸ್ಪತ್ರೆಗಳಲ್ಲಿನ ತುರ್ತು ವೈದ್ಯರ ಕೊರತೆಯ ಪ್ರಮಾಣ ಶೇ.79.5 ಇದೆ, ತಜ್ಞ ವೈದ್ಯರು 36 ಗಂಟೆಗಳ ಕೆಲಸ ಮಾಡುವ ಪರಿಸ್ಥಿತಿ ಬಂದಿದೆ.

ಕೇಂದ್ರ ಸರ್ಕಾರ 'ಮಹಿಳಾ ಶಕ್ತೀಕರಣ' ಎಂದು ಘೋಷಿಸುತ್ತದೆಯಾದರೂ ಆಶಾ ಕಾರ್ಯಕರ್ತರಿಗೆ ಕೇವಲ ರೂ. 2.000 ವೇತನ ನೀಡಲಾಗುತ್ತಿದೆ. ಇದು ಮಹಿಳಾ ಸಬಲೀಕರಣವೆ? ಕರ್ನಾಟಕ ಸರ್ಕಾರ 2025ರ ಏಪ್ರಿಲ್ 1 ರಿಂದ ಆಶಾ ಕಾರ್ಯಕರ್ತರಿಗೆ ಶೇ.10,000 ವೇತನವನ್ನು ಘೋಷಿಸಿದೆ. ಕೇಂದ್ರ ಸರ್ಕಾರ ಕಾರ್ಪೊರೇಟ್‌ಗಳಿಗೆ ಸಾವಿರಾರು ಕೋಟಿ ರಿಯಾಯಿತಿಗಳನ್ನು ನೀಡಿದರೂ, ಮಹಿಳಾ ಆರೋಗ್ಯ ಕಾರ್ಯಕರ್ತರ ಜೀವನೋಪಾಯಕ್ಕೆ ಕೇವಲ ರೂ. 2,000 - 4,000 ನೀಡುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.ಈ ಬಜೆಟ್ ಕೇವಲ ವೈಫಲ್ಯವಲ್ಲ, ಭಾರತದ ಕಾರ್ಮಿಕ ವರ್ಗ, ರೈತರು, ಮಹಿಳೆಯರು, ಯುವಕರು-ಎಲ್ಲರಿಗೂ ಮಾಡಿದ ದ್ರೋಹವಾಗಿದೆ.

ನಮ್ಮ ಕಾರ್ಮಿಕರ ಶಕ್ತಿಯನ್ನು ಕುಗ್ಗಿಸಿ, ನಮ್ಮ ರೈತರ ಆಶಯಗಳನ್ನು ತುಳಿದು, ನಮ್ಮ ಮಹಿಳೆಯರ ಸಮಾನತೆಯನ್ನು ನಿರಾಕರಿಸಿ, ನಮ್ಮ ಯುವಕರ ಭವಿಷ್ಯವನ್ನು ನಿರ್ಲಕ್ಷಿಸಿ ಭಾರತವನ್ನು ವಿಶ್ವಗುರುವನ್ನಾಗಿ ಮಾಡಲು ಸಾಧ್ಯವಿಲ್ಲ ಎಂದು ಪ್ರಭಾ ಅವರು ಬಜೆಟ್ ಕುರಿತು ಸಂಸತ್ ಸದನದಲ್ಲಿ ತಮ್ಮ ಅನಿಸಿಕೆ ವ್ಯಕ್ತಪಡಿಸಿದ್ದಾರೆ.

# ಜಿಲ್ಲೆಯಲ್ಲಿ ಇಂದು, ನಾಳೆ ನಂದಿ ರಥಯಾತ್ರೆ

ದಾವಣಗೆರೆ, ಫೆ.12- ದೇಶಿ ಗೋಮಾತೆಯ ಮಹಿಮೆ ಜನರಿಗೆ ತಿಳಿಸುವುದು ಹಾಗೂ ಗವ್ಯ ಉತ್ಪನ್ನ ಬಳಕೆಯ ಪ್ರಚಾರ ಮಾಡುವ ಉದ್ದೇಶದಿಂದಾಗಿ 'ನಂದಿ ರಥಯಾತ್ರೆ' ನಾಳೆ ದಿನಾಂಕ 13 ಮತ್ತು 14ರಂದು ಜಿಲ್ಲೆಗೆ ಆಗಮಿಸಲಿದೆ ಎಂದು ಕುಮಾರ ಸ್ವಾಮಿ ಬಿಳಿಚೋಡು ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಗೋ ಸೇವಾ ಗತಿವಿಧಿ, ರಾಧ ಸುರಭಿ ಗೋ ಮಂದಿರ ಹಾಗೂ ರಾಷ್ಟ್ರೀಯ ಗೋ ಸೇವಾ ಸಂಸ್ಥಾನ ಟ್ರಸ್ಟ್ ವತಿಯಿಂದ ಈ ರಥಯಾತ್ರೆ ನಡೆಯುತ್ತಿದೆ ಎಂದು ಹೇಳಿದರು.

ಈಗಾಗಲೇ 2024ರ ಡಿ.31ರಿಂದ ನಂದಿ ರಥಯಾತ್ರೆ ಪ್ರಾರಂಭವಾಗಿದ್ದು, ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸಂಚರಿಸಿದ್ದು, ಇದೀಗ ಹರಿಹರ ಮಾರ್ಗವಾಗಿ ದಾವಣಗೆರೆಗೆ ಬರಲಿದೆ ಎಂದು ಮಾಹಿತಿ ನೀಡಿದರು. ನಾಳೆ ದಿನಾಂಕ 13ರ ಗುರುವಾರ ಹರಿಹರಕ್ಕೆ ಆಗಮಿಸಲಿದೆ ಎಂದ ಅವರು, ನಾಡಿದ್ದು ದಿನಾಂಕ 14ರ ಮಧ್ಯಾಹ್ನ 3.30ಕ್ಕೆ ದಾವಣಗೆರೆಗೆ ನಂದಿ ಯಾತ್ರೆ ಆಗಮಿಸಲಿದ್ದು, ನಗರದ ವಿದ್ಯಾರ್ಥಿ ಭವನ, ಅಂಬೇಡ್ಕರ್ ವೃತ್ತ, ಜಯದೇವ ವೃತ್ತ, ಪ್ರವಾಸಿ ಮಂದಿರ ಹಾಗೂ ರಾಮಮಂದಿರ ಸೇರಲಿದೆ ಎಂದು ವಿವರಿಸಿದರು. 88 ದಿನಗಳ ಕಾಲ ರಾಜ್ಯಾದ್ಯಂತ ನಡೆಯುವ ರಥಯಾತ್ರೆಯು 108 ಸ್ಥಾನಗಳಲ್ಲಿ ಗವ್ಯ ಉತ್ಪನ್ನ ಮಾರಾಟ ಕೇಂದ್ರ ಉದ್ಘಾಟನೆ ಆರೋಗ್ಯಯುತ, ಸ್ವಾವಲಂಬಿ, ವಿಶ್ವಗುರು ಭಾರತ ಹಾಗೂ ನಂದಿಯಿಂದ ಫಲವತ್ತಾದ ಮಣ್ಣು, ಶುದ್ಧ ನೀರು-ಗಾಳಿ, ಪರಿಸರ ಸಂರಕ್ಷಣೆ ಮಾಡುವ ಗುರಿ ಹೊಂದಲಾಗಿದೆ ಎಂದು ತಿಳಿಸಿದರು.

ಈ ವೇಳೆ ತಿಪ್ಪಗೊಂಡನಹಳ್ಳಿ ಶಿವಲಿಂಗಪ್ಪ, ಶಾಂತಕುಮಾರ್ ವಿ. ಪುರಾಣಿಕ ಸುದ್ದಿಗೋಷ್ಠಿಯಲ್ಲಿದ್ದರು.

# ಹಗರಣ ಲೋಪಕ್ಕೆ ಅಧಿಕಾರಿಗಳೇ ಕಾರಣ

(3ನೇ ಪುಟದಿಂದ) ವರದಿ ಪರಿಶೀಲನೆ ನಂತರ ಅಧಿಕಾರಿಗಳು ಲೋಕಾಯುಕ್ತ ಐಜಿ ಸುಬ್ರಮಣ್ಯೇಶ್ವರ ರಾವ್ ಅವರಿಗೆ ನೀಡಿದರು.

ವರದಿ ಬಂದ ನಂತರ ಸುಬ್ರಮಣ್ಯೇಶ್ವರ ರಾವ್ ಅವರು, ಸಂಜೆ ತನಿಖಾಧಿಕಾರಿಯನ್ನು ಕರೆಸಿಕೊಂಡು ಪೂರ್ಣ ಮಾಹಿತಿ ಪಡೆದರು.

ಐಜಿ ಅವರು ಬಹುತೇಕ ಒಂದೆರಡು ದಿನಗಳಲ್ಲಿ ಪೊಲೀಸ್ ಮಹಾನಿರ್ದೇಶಕರೊಂದಿಗೆ ತನಿಖಾ ವರದಿಗೆ ಸಂಬಂಧಿಸಿದಂತೆ ಚರ್ಚೆ ನಡೆಸಿ, ನಂತರ ತನಿಖಾ ವರದಿ ಮಾಹಿತಿ ಮೇಲೆ ತಪ್ಪಿತಸ್ತ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ದಾವೆ ಹೂಡಬೇಕೇ, ಇಲ್ಲವೇ ಇಲಾಖಾ ತನಿಖೆ ನಡೆಸಲು ಶಿಫಾರಸ್ಸು ಮಾಡಬೇಕೇ ಎಂಬ ಬಗ್ಗೆ ತಜ್ಞರು ನೀಡುವ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಿದ್ದಾರೆ.

ಉದೇಶ್ ಅವರು, ತಾವು ನಡೆಸಿರುವ ತನಿಖಾ ವರದಿ, ಅದಕ್ಕೆ ಸಂಬಂಧಿಸಿದ ದಾಖಲೆ, ಮುಡಾ ನಿವೇಶನಗಳ ಹಂಚಿಕೆಯಲ್ಲಿ ಎಲ್ಲೆಲ್ಲಿ ಲೋಪ ಮಾಡಿದೆ, ನಿವೇಶನಗಳನ್ನು ಯಾವ ರೀತಿ ಹಂಚಿಕೆ ಮಾಡಿದೆ ಹಾಗೂ ನೋಂದಣಿಗೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸಿದ್ದಾರೆ.

ಅವರು ಕಂದಾಯ ಮತ್ತು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಭೂ ಮಾಲೀಕರಿಂದ ಪಡೆದಿರುವ ಮಾಹಿತಿ, ದಾಖಲೆಗಳನ್ನು ವರದಿಯಲ್ಲಿ ಸಲ್ಲಿಸಿದ್ದಾರೆ.

ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ದೂರಿನ ಮೇರೆಗೆ ರಾಜ್ಯಪಾಲರು, ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದರು.

ಇದನ್ನು ಪ್ರಶ್ನಿಸಿ, ಮುಖ್ಯಮಂತ್ರಿ ನ್ಯಾಯಾಲಯದ ಮೊರೆ ಹೋಗಿದ್ದರು, ರಾಜ್ಯ ಹೈಕೋರ್ಟ್ ಪ್ರಕರಣದ ವಾದ-ಪ್ರತಿವಾದ ಆಲಿಸಿದ ನಂತರ ರಾಜ್ಯಪಾಲರ ನಿರ್ಧಾರವನ್ನು ಎತ್ತಿಹಿಡಿದಿತ್ತು.

ಆ ನಂತರ ಜನಪ್ರತಿನಿಧಿಗಳ ನ್ಯಾಯಾಲಯ ಲೋಕಾಯುಕ್ತ ತನಿಖೆಗೆ ಆದೇಶ ನೀಡಿದ್ದಲ್ಲದೆ, ವರದಿಯನ್ನು ನಿಗದಿತ ಸಮಯದೊಳಗೆ ನೀಡುವಂತೆ ಗಡುವು ವಿಧಿಸಿತ್ತು.

# ಸಂತ ಸೇವಾಲಾಲ್ ಜಯಂತಿ : ಮೆರವಣಿಗೆ



ಜಗಳೂರು

ಜಗಳೂರು, ಫೆ. 12 - ಸಂತ ಸೇವಾಲಾಲ್ ಅವರ 286 ನೇ ಜಯಂತ್ಯೋತ್ಸವದ ಅಂಗವಾಗಿ ಬಂಜಾರ ಸಮುದಾಯದಿಂದ ಪ್ರವಾಸಿ ಮಂದಿರದಿಂದ ತಾಲ್ಲೂಕು ಕಛೇರಿವರೆಗೂ ಬೆಳ್ಳಿ ಸಾರೋಟ್‌ನಲ್ಲಿ ಸಂತ ಸೇವಾಲಾಲ್ ಭಾವ ಚಿತ್ರದ ಬೃಹತ್ ಮೆರವಣಿಗೆ ನಡೆಸಲಾಯಿತು.

ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಕೃಷ್ಣನಾಯ್ಕ, 2017 ರಲ್ಲಿ ಸರ್ಕಾರದ ಆದೇಶದಂತೆ ಸಂತ ಸೇವಾಲಾಲ್ ಅವರ ಜಯಂತಿಯನ್ನು ಸರ್ಕಾರಿ ದಿನಾಚರಣೆಯನ್ನಾಗಿ ಪ್ರತಿ ಕಛೇರಿಗಳಲ್ಲಿಯೂ ರಜಾ ರಹಿತವಾಗಿ ಆಚರಿಸಲಾಗುತ್ತಿದೆ ಎಂದರು.

ಬಂಜಾರ ಸಮುದಾಯದವರು ಸಂತ ಸೇವಾಲಾಲ್ ಅವರನ್ನು ಸ್ಮರಿಸುವ ಮೂಲಕ ಹಿತ ಕಾಯುವುದು ಗುರುಗಳ ಆದರ್ಶಗಳನ್ನು ಪಾಲಿಸಬೇಕು ಎಂದು ಸಲಹೆ ನೀಡಿದರು.

ಕೆಪಿಸಿಸಿ ಎಸ್.ಟಿ. ಘಟಕದ ರಾಜ್ಯ ಕಾರ್ಯದರ್ಶಿ ಕೀರ್ತಿಕುಮಾರ್ ಮಾತನಾಡಿ, ಬಂಜಾರ ಸಮುದಾಯದವರ ಸಮುದಾಯ ಭವನ ನಿರ್ಮಾ ಣಕ್ಕೆ ಬಂಜಾರ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಯದೇವನಾಯ್ಕ ಅವರ ಸಹಕಾರದಿಂದ ನಮ್ಮ ತಂದೆ ಶಾಸಕ ಬಿ. ದೇವೇಂದ್ರಪ್ಪ ನೇತೃತ್ವದಲ್ಲಿ ನಿವೇಶನ ಗುರುತಿಸಲಾಗಿದ್ದು, ಮುಂಬರುವ ವರ್ಷದ ಸಂತ ಸೇವಾಲಾಲ್ ಜಯಂತ್ಯೋತ್ಸವದ ವೇಳೆಗೆ ಸಮುದಾಯ ಭವನ ನಿರ್ಮಾಣಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಕೊಟ್ಟೂರು ತಾಲ್ಲೂಕು ದೂಪದಹಳ್ಳಿ ಬಂಜಾರ ಮಠದ ಶಿವಪ್ರಕಾಶ್ ಸ್ವಾಮೀಜಿ ಆಶೀರ್ವಚನ ನೀಡಿ, ಸಂತ ಸೇವಾಲಾಲ್ ಅವರು ಬಂಜಾರ ಸಮುದಾಯಕ್ಕೆ ಸೀಮಿತವಾಗದೇ ವಿಶ್ವಕ್ಕೆ ಸಂದೇಶ ಸಾರಿದವರು. ಅವರ ಸಂದೇಶಗಳನ್ನು ಸಮಾಜಕ್ಕೆ ಪಸರಿಸೋಣ ಎಂದರು.

ಬಂಜಾರ ಸಮುದಾಯದ ಯುವಕರು, ತೀಜ್ ಹೊತ್ತ ಮಹಿಳೆಯರು, ಲಂಬಾಣಿ ಉಡುಪು ಧರಿಸಿ ಡಿಜೆ ಹಾಡಿಗೆ ಹೆಜ್ಜೆ ಹಾಕಿದರು. ಮಾಲಾಧಾರಿಗಳು ಇಂದಿನಿಂದ ಆರಂಭವಾಗುವ ಸಂತ ಸೇವಾಲಾಲ್ ಜಯಂತ್ಯೋತ್ಸವದ ಜಾತ್ರೆಗೆ ಮಾಲಾಧಾರಿಗಳು ಭಾಗವಹಿಸಲು ಪಾದಯಾತ್ರೆ ತೆರಳಿದರು.

ಈ ಸಂದರ್ಭದಲ್ಲಿ ಜಿ.ಪಂ.ಮಾಜಿ ಸದಸ್ಯ ಕೆಪಿ ಪಾಲಯ್ಯ, ಪ.ಪಂ. ಅಧ್ಯಕ್ಷ ನವೀನ್ ಕುಮಾರ್, ಲಂಬಾಣಿ ಸಮಾಜದ ತಾಲ್ಲೂಕು ಅಧ್ಯಕ್ಷ ತಿಪ್ಪೇಸ್ವಾಮಿ ನಾಯ್ಕ, ತಾ.ಪಂ ಇಓ ಕೆಂಚಪ್ಪ, ಪ.ಪಂ ಮುಖ್ಯಾಧಿಕಾರಿ ಲೋಕ್ಯಾನಾಯ್ಕ, ಸಮಾಜದ ಮುಖಂಡರಾದ ಮೂರ್ತಿನಾಯ್ಕ, ನರೇನಹಳ್ಳಿ ಕುಮಾರನಾಯ್ಕ, ಸತೀಶ್ ನಾಯ್ಕ, ವಕೀಲ ಉಮಾಪತಿನಾಯ್ಕ, ಧರ್ಮನಾಯ್ಕ, ಮಂಜಾನಾಯ್ಕ, ಅಂಜಿನಾಯ್ಕ, ರಾಜುನಾಯ್ಕ, ಕೊಟ್ರೇಶ್ ನಾಯ್ಕ, ಬಿಸ್ತುವಳ್ಳಿ ಬಾಬು, ಸಮಾಜಕಲ್ಯಾಣ ಇಲಾಖೆ ನಿವೃತ್ತ ಸಹಾಯ ನಿರ್ದೇಶಕ ಬಿ. ಮಹೇಶ್ವರಪ್ಪ ಮತ್ತಿತರರು ಭಾಗವಹಿಸಿದ್ದರು.

## ನಗರದಲ್ಲಿ ಇಂದು ಉಪನ್ಯಾಸ

ಬಾಪೂಜಿ ಮಕ್ಕಳ ಆರೋಗ್ಯ ಸಂಸ್ಥೆ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ವಿವೇಕ್ ಪೋಷಕರ ಆರೋಗ್ಯ ಕಾರ್ಯಾಗಾರದಡಿಯಲ್ಲಿ ಇಂದು ಸಂಜೆ 3.30ಕ್ಕೆ ಕೇಂದ್ರದ ಸಭಾಂಗಣದಲ್ಲಿ ವಿಶೇಷ ಉಪನ್ಯಾಸ ನಡೆಯಲಿದೆ.

ಪರೀಕ್ಷೆ ಸಮಯದಲ್ಲಿ ಮಕ್ಕಳ ಆರೋಗ್ಯ ಮತ್ತು ಪೋಷಕರಿಗೆ ಕಿವಿಮಾತು ವಿಷಯ ಕುರಿತು ಜಜಮು ವೈದ್ಯಕೀಯ ಮಹಾವಿದ್ಯಾಲಯದ ಸಹ ಪ್ರಾಧ್ಯಾಪಕರಾದ ಡಾ. ಕೆ.ಎ. ಛಾಯಾ ಅವರು ಮಾತನಾಡುವರು.

## ಕೊಂಡಜ್ಜಿ : ಇಂದು

ವೃತ್ತಿ ರಂಗಭೂಮಿ ರಂಗಾಯಣ (ದಾವಣಗೆರೆ) ಮತ್ತು ಕರ್ನಾಟಕ ನಾಟಕ ಅಕಾಡೆಮಿ (ಬೆಂಗಳೂರು) ಆಶ್ರಯದಲ್ಲಿ ಕೊಂಡಜ್ಜಿಯ ಸ್ಕೌಟ್ ಕ್ಯಾಂಪ್‌ನಲ್ಲಿ ನಡೆಯುತ್ತಿರುವ ವೃತ್ತಿ ರಂಗ ನಾಟಕ ರಚನಾ ಶಿಬಿರದ ಸಮಾರೋಪ ಸಮಾರಂಭವು ಇಂದು ಸಂಜೆ 4 ಗಂಟೆಗೆ ಜರುಗಲಿದೆ.

ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ಸಮಾರೋಪ ಭಾಷಣ ಮಾಡಲಿದ್ದು, ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ನಾಟಕಕಾರ ಬಸವರಾಜ ಪಂಚಗಲ್, ರಂಗ ನಿರ್ದೇಶಕ ನಟರಾಜ ಹೊನ್ನವಳ್ಳಿ (ತುಮಕೂರು) ಅತಿಥಿಗಳಾಗಿದ್ದಾರೆ.

ಅಧ್ಯಕ್ಷತೆ : ವೃತ್ತಿ ರಂಗಭೂಮಿ ರಂಗಾಯಣ (ದಾವಣಗೆರೆ) ನಿರ್ದೇಶಕ ಮಲ್ಲಿಕಾರ್ಜುನ ಕಡಕೋಳ.

# ಕೊಡಗನೂರಿನಲ್ಲಿ ಇಂದು ತಾಲ್ಲೂಕು ಕಸಾಪದಿಂದ ಉಪನ್ಯಾಸ

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಶಾಲಾ-ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವದ ಅಂಗವಾಗಿ ದತ್ತಿ ಉಪನ್ಯಾಸ ಕಾರ್ಯಕ್ರಮವು ಕೊಡಗನೂರು ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಇಂದು ಮಧ್ಯಾಹ್ನ 2 ಗಂಟೆಗೆ ನಡೆಯಲಿದೆ.

ಶ್ರೀಮತಿ ಕೆ.ಎಂ. ಗೀತಾ ಅಧ್ಯಕ್ಷತೆ ವಹಿಸುವರು. 'ವಿದ್ಯೆ ಬಾಳಿನ ಬೆಳಕು' ವಿಷಯ ಕುರಿತು ಎಸ್.ಆರ್. ನಯನಜ ಮೂರ್ತಿ ಉಪನ್ಯಾಸ ನೀಡುವರು. ದಾಗಿನಕಟ್ಟೆ ಪರಮೇಶ್ವರಪ್ಪ, ಷಡಕ್ಷರಪ್ಪ ಎಂ. ಬೇತೂರು, ಶ್ರೀಮತಿ ಪರಿಮಳ ಜಗದೀಶ್ ಉಪಸ್ಥಿತರಿರುವರು. ತಾಲ್ಲೂಕು ಕಸಾಪ ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪ ಪ್ರಾಸ್ತಾವಿಕ ನುಡಿಗಳನ್ನಾಡುವರು.

ಕೊಡಗನೂರು ಶ್ರೀಮತಿ ನಿಂಗಮ್ಮ ಮತ್ತು ಅಜ್ಜಪ್ಪಗೌಡ್ರ ಸ್ಮರಣಾರ್ಥ ದತ್ತಿ ದಾನಿಗಳು ಶ್ರೀಮತಿ ಕೆ.ಎಸ್. ಶೈಲ, ಶ್ರೀಮತಿ ಕೆ.ಎಸ್. ಪೂರ್ಣಿಮಾ, ಪ್ರವೀಣ್ ಸ್ಕ್ಯಾನಿಂಗ್ ಸೆಂಟರ್, ತುಮಕೂರು, ಕೊಡಗನೂರು ಶ್ರೀಮತಿ ಸಾವಿತ್ರಮ್ಮ ಮತ್ತು ಶ್ರೀ ಅಂಗಡಿ ನಂಜುಂಡಪ್ಪ ಸ್ಮರಣಾರ್ಥ ದತ್ತಿ ದಾನಿಗಳು ಶ್ರೀಮತಿ ಎ.ಬಿ. ನಾಗರತ್ನ ಮತ್ತು ಬಸವರಾಜಪ್ಪ, ದಾವಣಗೆರೆ ಹಾಗೂ ಕೊಡಗನೂರು ಎಸ್. ಚನ್ನವೀರಪ್ಪ ಮಾಸ್ತರ್ ಶ್ರೀಮತಿ ಎಸ್. ವೀರಮ್ಮ ಸ್ಮರಣಾರ್ಥ ದತ್ತಿ ದಾನಿಗಳು ಎಸ್.ಸಿ. ಮಹಾರುದ್ರಪ್ಪ ಮತ್ತು ಶ್ರೀಮತಿ ಕೆ.ಬಿ. ಮಂಜುಳಾ ಇವರುಗಳಿಂದ ನಡೆಯುವುದು.

# ಮೈಕ್ರೋ ಫೈನಾನ್ಸ್ ಸುಗ್ರೀವಾಜ್ಞೆಗೆ ರಾಜ್ಯಪಾಲರ ಒಪ್ಪಿಗೆ

(3ನೇ ಪುಟದಿಂದ) ರಾಜ್ಯಪಾಲರು ಸುಗ್ರೀವಾಜ್ಞೆಗೆ ಒಪ್ಪಿಗೆ ನೀಡಿದ್ದಾರೆ. ಸರ್ಕಾರ ಮುಂದಿನ ಅಧಿವೇಶನದಲ್ಲಿ ಸುಗ್ರೀವಾಜ್ಞೆಯನ್ನು ಸದನದಲ್ಲಿ ಮಂಡಿಸಬೇಕು ಎಂದು ರಾಜ್ಯಪಾಲರು ತಿಳಿಸಿದ್ದಾರೆ ಎನ್ನಲಾಗುತ್ತಿದೆ.

ಫ್ಲಾಟ್‌ಗಳು ಮಾರಾಟಕ್ಕಿವೆ

ದಾವಣಗೆರೆ ಸಿಟಿ ಎಸ್.ಎಸ್. ಬಡಾವಣೆ, ಎ ಬ್ಲಾಕ್, ಇಂಡೋರ್ ಸ್ಟೇಡಿಯಂ ಹತ್ತಿರ ನಿರ್ಮಿಸಿರತಕ್ಕ ಅಪಾರ್ಟ್‌ಮೆಂಟ್‌ನಲ್ಲಿ 2 BHK, ಗ್ರಾನೈಟ್ ಫ್ಲೋರಿಂಗ್, ವಾರ್ಡ್‌ರೂಪ್, ದೇವರಮನೆ, ನೀರಿನ ಸೌಕರ್ಯ, ಲಿಫ್ಟ್ ಸೌಕರ್ಯ, ಕಾರ್ ಪಾರ್ಕಿಂಗ್ ಸೌಲಭ್ಯವುಳ್ಳ ಫ್ಲಾಟ್‌ಗಳು ರಿಯಾಯ್ತಿ ದರದಲ್ಲಿ ಮಾರಾಟಕ್ಕಿವೆ

ಬಿ.ಎಸ್. ಸಂತೋಷ
96322 67555

# ನಗರದಲ್ಲಿ ಇಂದು ಶಿಕ್ಷಣ ಮೇಳ

ದಾವಣಗೆರೆ, ಫೆ.12- ನಗರದ ಜಿ.ಎಂ. ವಿಶ್ವವಿದ್ಯಾಲಯದ ಕೇಂದ್ರ ಗ್ರಂಥಾಲಯದಲ್ಲಿ ನಾಳೆ ದಿನಾಂಕ 13ರ ಗುರುವಾರ ಬೆಳಗ್ಗೆ 9.30ಕ್ಕೆ ಅಂತರ ರಾಷ್ಟ್ರೀಯ ಶಿಕ್ಷಣ ಮೇಳ ನಡೆಯಲಿದೆ ಎಂದು ಕಾಲೇಜಿನ ತರಬೇತಿ ಮತ್ತು ಉದ್ಯೋಗ ವಿಭಾಗದ ನಿರ್ದೇಶಕ ತೇಜಸ್ವಿ ಕಟ್ಟಿಮನಿ ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9.30ರಿಂದ ಸಂಜೆ 5ರ ವರೆಗೆ ನಡೆಯುವ ಕಾರ್ಯಕ್ರಮಕ್ಕೆ ವಿವಿ ಕುಲಪತಿ ಎಸ್.ಆರ್. ಶಂಕಪಾಲ್ ಶಿಕ್ಷಣ ಮೇಳಕ್ಕೆ ಚಾಲನೆ ನೀಡಲಿದ್ದಾರೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಬೆಂಗಳೂರಿನ ಎಜುಕೇಷನ್ ಸಂಸ್ಥೆಯ ಸಿಇಓ ಅರುಣ ಪ್ರಸಾದ್, ಕಂಪನಿಯ ಎಂ.ಡಿ ಸವಿತಾ ಅರುಣ್, ಡಾ. ವೀರ ಗಂಗಾಧರ ಸ್ವಾಮಿ ಇದ್ದರು.

6000 SQ Ft Ready Shed
Required Rent
For INDUSTRIAL PURPOSE
in Davangere City Limit
98447 10827

ಕ್ರಯಪತ್ರ ಕಳೆದಿದೆ

ನಾನು, ಶ್ರೀ ಶಿವರಾಜ್ ಕೆ.ಆರ್. ಬಿನ್ ಲೇಟ್ ರಾಜಪ್ಪ ಕೆ.ಜಿ. ವಯಸ್ಸು 31 ವರ್ಷ, ವಾಸ : ಕೆಂಚಮ್ಮನಹಳ್ಳಿ ಗ್ರಾಮ, ಗುಡಾಳು ಪೋಸ್ಟ್, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ., ವಾಸಿಯಾದ ನಾನು ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಹೇಳುವುದೇನೆಂದರೆ

ನಾನು ಈ ಮೇಲ್ಕಂಡ ವಿಳಾಸದಲ್ಲಿ ಖಾಯಂ ವಾಸವಾಗಿರುತ್ತೇನೆ. ದಾವಣಗೆರೆ ತಾಲ್ಲೂಕು ಆನಗೋಡು ಹೋಬಳಿ, ಕೆಂಚಮ್ಮನಹಳ್ಳಿ ಗ್ರಾಮಕ್ಕೆ ಸೇರಿದ ರಿ.ಸ.ನಂ. 13/2,3,7 ಹಾಗೂ ರೀ.ಸನಂ. 42 ಜಮೀನನ್ನು ದಾನ ಪತ್ರದ ಮೂಲಕ ನನ್ನ ಹೆಸರಿಗೆ ಪಡೆದುಕೊಂಡಿರುತ್ತೇನೆ. ಹಾಗೂ ನೋಂದಣಿ ಸಂಖ್ಯೆ : 1ನೇ ಪುಸ್ತಕದ ದಸ್ತಾವೇಜು ನಂಬರ್ ಡಿವಿಜಿ-1-03481-2021-22 ಆಗಿ ಸಿ.ಡಿ. ನಂಬರ್ ಡಿವಿಜಿಡಿ 1098ನೇದ್ದರಲ್ಲಿ ದಿನಾಂಕ : 02.07.2021ರಂದು ದಾವಣಗೆರೆ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ನೋಂದಣಿ ಆಗಿರುತ್ತದೆ.

ಸದರಿ ಮೇಲ್ಕಂಡ ಜಮೀನಿನ ಮೂಲ ದಾನ ಕ್ರಯಪತ್ರವನ್ನು ನಾನು ದಿನಾಂಕ : 07.09.2024ರಂದು ಬೆಳಿಗ್ಗೆ 10ರ ಸಮಯದಲ್ಲಿ ದಾವಣಗೆರೆ ಜಿಲ್ಲೆ ಮತ್ತು ತಾಲ್ಲೂಕು, ಆನಗೋಡು ಗ್ರಾಮದಲ್ಲಿರುವ ಜೆರಾಕ್ಸ್ ಅಂಗಡಿಗೆ ಈ ಮೇಲ್ಕಂಡ ದಾನ ಪತ್ರವನ್ನು ಜೆರಾಕ್ಸ್ ಮಾಡಿಕೊಂಡು ದ್ವಿಚಕ್ರ ವಾಹನದಲ್ಲಿ ಬರುತ್ತಿರುವಾಗ ಮಾರ್ಗ ಮಧ್ಯೆ ಕ್ರಯಪತ್ರವು ಕಳೆದು ಹೋಗಿರುತ್ತದೆ.

ಸಿಕ್ಕವರು ಈ ಕೆಳಗಿನ ಫೋನಿಗೆ ತಿಳಿಸಲು ಕೋರಿದೆ. 80953 08973

ಕ್ರಯಪತ್ರ ಕಳೆದಿದೆ

ನಾನು, ಶ್ರೀ ಜಿ.ಎನ್. ಬಸವರಾಜ ಬಿನ್ ಲೇಟ್ ಜಿ.ಎಸ್. ನಿರಂಜನ್., ವಯಸ್ಸು 31 ವರ್ಷ, ವಾಸ : ಗುಮ್ಮನೂರು ಗ್ರಾಮ, ಗುಡಾಳು ಪೋಸ್ಟ್, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ., ವಾಸಿಯಾದ ನಾನು ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಹೇಳುವುದೇನೆಂದರೆ

ನಾನು ಈ ಮೇಲ್ಕಂಡ ವಿಳಾಸದಲ್ಲಿ ಖಾಯಂ ವಾಸವಾಗಿರುತ್ತೇನೆ. ದಾವಣಗೆರೆ ತಾಲ್ಲೂಕು ಆನಗೋಡು ಹೋಬಳಿ, ಗುಮ್ಮನೂರು ಗ್ರಾಮಕ್ಕೆ ಸೇರಿದ ರಿ.ಸ.ನಂ. 133/1ರಲ್ಲಿ ವಿಸ್ತೀರ್ಣ : 2-ಎಕರೆ, 12- ಗುಂಟೆ ಜಮೀನು ಇದರ ನೋಂದಣಿ ಸಂಖ್ಯೆ : 1ನೇ ಪುಸ್ತಕದ ದಸ್ತಾವೇಜು ನಂಬರ್ ಡಿವಿಜಿ-1-19259-2013-14 ಆಗಿ ಸಿ.ಡಿ. ನಂಬರ್ ಡಿವಿಜಿಡಿ 324ನೇದ್ದರಲ್ಲಿ ದಿನಾಂಕ : 15.03.2014ರಂದು ದಾವಣಗೆರೆ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ನೋಂದಣಿ ಆಗಿರುತ್ತದೆ.

ಸದರಿ ಮೇಲ್ಕಂಡ ಜಮೀನಿನ ಮೂಲ ದಾನ ಕ್ರಯಪತ್ರವನ್ನು ನಾನು ದಿನಾಂಕ : 10.11.2024ರಂದು ಬೆಳಿಗ್ಗೆ 10ರ ಸಮಯದಲ್ಲಿ ನಾನು ನನ್ನ ಮನೆ ಖಾಲಿ ಮಾಡುವ ಸಮಯದಲ್ಲಿ ಸದರಿ ಕ್ರಯಪತ್ರವು ಕಳೆದು ಹೋಗಿರುತ್ತದೆ.

ಸಿಕ್ಕವರು ಈ ಕೆಳಗಿನ ಫೋನಿಗೆ ತಿಳಿಸಲು ಕೋರಿದೆ. 98443 65413




KA/SK/DVG-028/2024-2026. O/P @ B.V. Nagar P.O. JANATHAVANI - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas